# ಅಧ್ಯಾಯ III

# ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯ ಕಂಡಿಕೆಗಳು

# ಅಧ್ಯಾಯ – III

## ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳು

ಕರ್ನಾಟಕದಲ್ಲಿ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ರಾಜ್ಯ ಸರ್ಕಾರದ ಕಂಪನಿಗಳು ಮತ್ತು ಶಾಸನಬದ್ದ ನಿಗಮಗಳನ್ನು ಒಳಗೊಂಡಿರುತ್ತವೆ. ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳನ್ನು ಜನತೆಯ ಕ್ಷೇಮಾಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ವಾಣಿಜ್ಯ ಸ್ವರೂಪದ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ಹಾಗೂ ರಾಜ್ಯದ ಆರ್ಥಿಕ ಸ್ಥಿತಿಯಲ್ಲಿ ಒಂದು ಪ್ರಮುಖ ಸ್ಥಾನವನ್ನು ಪಡೆದುಕೊಳ್ಳುವ ಸಲುವಾಗಿ ಸ್ಥಾಪಿಸಲಾಗಿರುವುದು. 31 ಮಾರ್ಚ್ 2022ರಲ್ಲಿದ್ದಂತೆ ಕರ್ನಾಟಕದಲ್ಲಿ ಆರು ಶಾಸನಬದ್ದ ನಿಗಮಗಳು ಮತ್ತು 13 ಕಾರ್ಯಸ್ಥಗಿತ ಸರ್ಕಾರಿ ಕಂಪನಿಗಳನ್ನು ಒಳಗೊಂಡಂತೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವ್ಯಾಪ್ತಿಯ ಅಡಿಯಲ್ಲಿ 125 ಸಾರ್ವಜನಿಕ ವಲಯ ಉದ್ದಿಮೆಗಳು ಇದ್ದವು. ಇವುಗಳ ಪೈಕಿ ಒಂದು ಸಾರ್ವಜನಿಕ ವಲಯ ಉದ್ದಿಮೆಯನ್ನು[71] ಷೇರು ವಿನಿಮಯದ ಅಡಿಯಲ್ಲಿ ಪಟ್ಟಿ ಮಾಡಲಾಗಿದ್ದಿತು. ಹೊಸದಾಗಿ ಸ್ಥಾಪಿಸಲಾಗಿರುವ / 31 ಮಾರ್ಚ್ 2022ರಲ್ಲಿದ್ದಂತೆ ಲೆಕ್ಕಪರಿಶೋಧನೆಗೆ ವಹಿಸಲಾಗಿರುವಂತಹ ಒಂದು ಸಾರ್ವಜನಿಕ ವಲಯ ಉದ್ದಿಮೆಯನ್ನು[72] ಸೇರಿಸಲಾಗಿರುವುದು. 125 ಸಾರ್ವಜನಿಕ ವಲಯ ಉದ್ದಿಮೆಗಳ ಪಟ್ಟಿಯನ್ನು ***ಅನುಬಂಧ – 32ರಲ್ಲಿ*** ನೀಡಲಾಗಿರುವುದು.

ಈ ಅಧ್ಯಾಯವು ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಮೂರು ಅನುಪಾಲನಾ ಲೆಕ್ಕಪರಿಶೋಧನೆಗಳಲ್ಲಿ ಗಮನಿಸಲಾಗಿರುವಂತಹ ಅಂಶಗಳನ್ನು ಒಳಗೊಂಡಿರುತ್ತದೆ. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಪ್ರಮುಖ ಅಂಶಗಳು ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಪೂರ್ವಭಾವಿಯಾಗಿ ಯೋಜಿಸುವಿಕೆ ಮತ್ತು ಗುತ್ತಿಗೆ ನಿರ್ವಹಣೆಯಲ್ಲಿನ ಲೋಪದೋಷಗಳನ್ನು ಎತ್ತಿ ತೋರಿಸುತ್ತವೆ.

**ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ.**

### ***3.1*** ಸೌರ ನೀರು ಎತ್ತುವ ಪಂಪು ಕಾರ್ಯಕ್ರಮವನ್ನು ಕಾರ್ಯಗತಗೊಳಿಸುವಲ್ಲಿ ಭರಿಸಲಾದಂತಹ ನಷ್ಟ.

**ರಾಜ್ಯವು ಚಿಂತಿಸಲಾಗಿದ್ದಂತಹ ಸೌರ ನೀರು ಎತ್ತುವ ಪಂಪುಗಳ ಸಾಮರ್ಥ್ಯದ ಕೇವಲ ಶೇ.43ರಷ್ಟನ್ನು ಮಾತ್ರ ಕಾರ್ಯೋದ್ಯುಕ್ತಗೊಳಿಸಲು ಸಾಧ್ಯವಾಗಿದ್ದಿತು. ಕಂಪನಿಯು ಸೇವಾ ಶುಲ್ಕಗಳ ಪಾವತಿಗಾಗಿ ಕಡಿಮೆ ಪ್ರಮಾಣದಲ್ಲಿ ಕೋರಿದ್ದುದು/ ಸ್ವೀಕರಿಸಿದ್ದುದು, ವಿಳಂಬಕ್ಕಾಗಿ ಕೇಂದ್ರ ಸರ್ಕಾರದ ನವೀನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದಿಂದ ವಿಧಿಸಲಾದಂತಹ ದಂಡ ಹಾಗೂ ರಾಜ್ಯ ಸರ್ಕಾರದಿಂದ ಬಾಕಿಯಿದ್ದಂತಹ ಕೊಡುಗೆಯನ್ನು ಸ್ವೀಕರಿಸದಿದ್ದ ಕಾರಣ ಯೋಜನೆಯಲ್ಲಿ ₹2.64 ಕೋಟಿ ಮೊತ್ತದಷ್ಟು ನಷ್ಟವನ್ನು ಅನುಭವಿಸಿತು.**

**3.1.1** ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (ಕಂಪನಿ) ನವೀಕರಿಸಬಹುದಾದ ಇಂಧನದ ಅಭಿವೃದ್ಧಿಗಾಗಿ ರಾಜ್ಯ ಸಂಪರ್ಕಸೇತು ಸಂಸ್ಥೆಯಾಗಿದ್ದು, ಅದಕ್ಕೆ

71 ಮೈಸೂರು ಕಾಗದ ಕಾರ್ಖಾನೆ ನಿಯಮಿತ.
72 ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್).

ಭಾರತ ಸರ್ಕಾರದ ನವೀನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದಿಂದ ಪ್ರಾಯೋಜಿಸಲ್ಪಟ್ಟಂತಹ ನೀರಾವರಿ ಮತ್ತು ಕುಡಿಯುವ ನೀರಿಗಾಗಿ ಸೌರ ನೀರು ಎತ್ತುವ ಪಂಪು[73] ಕಾರ್ಯಕ್ರಮವನ್ನು ವಹಿಸಲಾಗಿದ್ದಿತು (ಸೆಪ್ಟೆಂಬರ್ 2014). ಈ ಕಾರ್ಯಕ್ರಮವು ಬೆಳೆಗಳಿಗೆ ನೀರಾವರಿ ಸೌಲಭ್ಯಗಳಿಗಾಗಿ ವರ್ಷದ ಬಹಳಷ್ಟು ಅವಧಿಯಲ್ಲಿ ಹಗಲು ಹೊತ್ತಿನಲ್ಲಿ ಲಭ್ಯವಿರುವಂತಹ ಗ್ರಿಡ್ ಸಂಪರ್ಕತೆಯಿರದ ಸೌರ ವಿದ್ಯುಚ್ಛಕ್ತಿಯೊಂದಿಗೆ ರೈತರುಗಳಿಗೆ ಪ್ರಯೋಜನವಾಗುವಂತೆ ಮಾಡುವ ಹಾಗೂ ಗ್ರಿಡ್ ಮೇಲಿನ ಅವಲಂಬನೆಯನ್ನು ಕಡಿಮೆಗೊಳಿಸುವ ಉದ್ದೇಶವನ್ನು ಹೊಂದಿದ್ದಿತು. ಕಂಪನಿಯ ಜವಾಬ್ದಾರಿಯು ಈ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿರುವಂತಹ ಎಲ್ಲಾ ಇಲಾಖೆಗಳೊಂದಿಗೆ ಅಂದರೆ ಕೃಷಿ, ತೋಟಗಾರಿಕೆ, ನೀರಾವರಿ ಇಲಾಖೆ, ಇತ್ಯಾದಿಗಳೊಂದಿಗೆ ಸಮನ್ವಯತೆಯನ್ನು ಕಾಯ್ದುಕೊಳ್ಳುವುದಾಗಿದ್ದಿತು. ಕಾರ್ಯಕ್ರಮವು ನವೀನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ, ಕೃಷಿ ಮಂತ್ರಾಲಯ, ರಾಜ್ಯ ಸರ್ಕಾರ ಮತ್ತು ಬ್ಯಾಂಕುಗಳಿಗೆ ಸಂಬಂಧಿಸಿದಂತೆ ಪ್ರಸಕ್ತ ಇರುವಂತಹ ಯೋಜನೆಗಳಿಂದ ಹಣಕಾಸನ್ನು ಪಡೆದುಕೊಳ್ಳುವುದು. ಕಾರ್ಯಗತಗೊಳಿಸುವ ಅವಧಿಯನ್ನು 2014–19 ಎಂದು ಯೋಜಿಸಲಾಗಿತ್ತು.



**ಛಾಯಾಚಿತ್ರ ಸಂಖ್ಯೆ 3.1: ಸೌರ ನೀರು ಎತ್ತುವ ಪಂಪು**

ಕಾರ್ಯಕ್ರಮಕ್ಕೆ ಹಣಕಾಸನ್ನು ಸೌರ ಪಂಪಿನ ಮಾನದಂಡ (ಬೆಂಚು ಮಾರ್ಕು) ಮೌಲ್ಯದ[74] ಶೇಕಡಾ 30ರಷ್ಟರವರೆವಿಗೆ ಕೇಂದ್ರ ಹಣಕಾಸು ಸಹಾಯಧನದ (ಸಿಎಫ್‌ಎ) ಮೂಲಕ, ಫಲಾನುಭವಿಗಳ ಕಾಣಿಕೆ (ಸಾಮಾನ್ಯ ಪ್ರವರ್ಗದವರಿಗೆ ಸ್ಥಾಪನೆ ಒಂದಕ್ಕೆ ರೂಪಾಯಿ ಒಂದು ಲಕ್ಷದಂತೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಯಾವುದೇ ಕಾಣಿಕೆ ನೀಡಬೇಕಿರುವುದಿಲ್ಲ) ಹಾಗೂ ಉಳಿಕೆ ಕಾಣಿಕೆಯನ್ನು ರಾಜ್ಯ ಸರ್ಕಾರವು ಹಣಕಾಸು ಒದಗಿಸುವ ಮೂಲಕ ಭರಿಸತಕ್ಕದ್ದು ಎಂಬುದಾಗಿ ನವೀನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದ ಮಾರ್ಗಸೂಚಿಗಳು ನಿರ್ದಿಷ್ಟಪಡಿಸಿದ್ದಿತು (ಸೆಪ್ಟಂಬರ್ 2014). ಕೇಂದ್ರ ಹಣಕಾಸು ಸಹಾಯಧನವನ್ನು (ಸಿಎಫ್‌ಎ) 24 ಜುಲೈ 2017ರಿಂದ ಜಾರಿಗೆ ಬಂದಂತೆ ಶೇಕಡಾ 20ಕ್ಕೆ ತಗ್ಗಿಸಲಾಯಿತು. ಕೇಂದ್ರ ಹಣಕಾಸು ಸಹಾಯಧನವನ್ನು ನವೀನ ಮತ್ತು ನವೀಕರಿಸಬಹುದಾದ ಮಂತ್ರಾಲಯವು ಮುಂಗಡ/ಮೈಲಿಗಲ್ಲುಗಳ ಆಧಾರದ ಮೇರೆಗೆ ಪಾವತಿಸುವುದು ಹಾಗೂ ಯೋಜನೆಯನ್ನು ಪೂರ್ಣಗೊಳಿಸಿದನಂತರ ಇತ್ಯರ್ಥಪಡಿಸುವುದು.

[73] ಒಂದು ಸೌರ ನೀರು ಎತ್ತುವ ಪಂಪು ವ್ಯವಸ್ಥೆಯು ಬದಲಿ ವ್ಯವಸ್ಥೆಯನ್ನು ಮಾಡುವಂತಹ ಚಾಲ್ತಿ (AC)ಅಥವಾ ಒಂದು ನೇರ ವಿದ್ಯುಚ್ಛಕ್ತಿ (DC) ಮೋಟಾರಿಗೆ ಅಳವಡಿಸಲಾಗಿರುವಂತಹ ಫೋಟೋವೋಲ್ಟಾಯಿಕ್ ಪ್ಯಾನೆಲ್ಲುಗಳನ್ನು, ಹೀರುವ/ಸೆಳೆಯುವ ಮತ್ತು ವಿತರಣಾ ಪೈಪುಗಳನ್ನು ಹಾಗೂ ವಿದ್ಯುತ್ ಸ್ವಿಚ್‌ಗೇರುಗಳನ್ನು ಒಳಗೊಂಡಿರುತ್ತದೆ.

[74] ನವೀನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯವು ಐದು HP ಯ ಸೌರ ನೀರು ಎತ್ತುವ ಪಂಪಿನ ಮಾನದಂಡ ಮೌಲ್ಯವನ್ನು ಖಚಿತಪಡಿಸಿಕೊಂಡು ತಿಳಿಸುತಿತ್ತು. ಪ್ರಮುಖವಾಗಿ ರಾಜ್ಯ ನೋಡಲ್ ಏಜೆನ್ಸಿಗಳು (SNA), ಸೋಲಾರ್ ಎನರ್ಜಿ ಕಾರ್ಪೊರೇಷನ್ ಆಫ್ ಇಂಡಿಯಾ (SECI) ಮತ್ತು ಇತರ ಸರ್ಕಾರಿ ಇಲಾಖೆಗಳು ಆಹ್ವಾನಿಸಿದ್ದ ಟೆಂಡರ್‌ಗಳಲ್ಲಿ ಹೊಮ್ಮಿದ ದರಗಳ ಆಧಾರದ ಮೇಲೆ ನವೀನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯವು ಮಾನದಂಡ ಮೌಲ್ಯವನ್ನು ನಿಗಧಿಪಡಿಸುತಿತ್ತು. ನವೀನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದ ಸಹಾಯಧನವನ್ನು ಪಂಪ್ ಸಾಮರ್ಥ್ಯದ ಪ್ರತಿ ಅಶ್ವಶಕ್ತಿ (hp)ಗೆ ರೂಪಾಯಿಗಳಲ್ಲಿ ನಿಗದಿಪಡಿಸಲಾಗುತಿತ್ತು.

ಕಂಪನಿಯು ಕಾರ್ಯಕ್ರಮದ ಕಾರ್ಯಗತಗೊಳಿಸುವಿಕೆಗಾಗಿ ನವೀನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದ ಪಾಲಿನ ಶೇಕಡಾ ಮೂರರ ದರದಲ್ಲಿ ಸೇವಾ ಶುಲ್ಕಗಳಿಗೆ ಅರ್ಹತೆಯನ್ನು ಹೊಂದಿದ್ದಿತು.

ಸೌರ ನೀರು ಎತ್ತುವ ಪಂಪುಗಳ ಸ್ಥಾಪನೆಯನ್ನು ಅದರ ಅನುಮೋದನೆಯ ದಿನಾಂಕದಿಂದ 12 ತಿಂಗಳುಗಳ ಒಳಗೆ ಪೂರ್ಣಗೊಳಿಸತಕ್ಕದ್ದು ಎಂಬುದಾಗಿ ನವೀನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದ ಮಾರ್ಗಸೂಚಿಗಳು ನಿರ್ದಿಷ್ಟಪಡಿಸಿದ್ದವು. ಅದನ್ನು ಸಮರ್ಥನೀಯವಾದಂತಹ ಕಾರಣಗಳೊಂದಿಗೆ ದಂಡ ವಿಧಿಸದೆಯೇ ನಾಲ್ಕು ತಿಂಗಳ ಅವಧಿಗೆ ವಿಸ್ತರಿಸಬಹುದಾಗಿದ್ದಿತು. ನಾಲ್ಕು ತಿಂಗಳುಗಳನ್ನು ಮೀರಿದ ಯಾವುದಾದರೂ ವಿಳಂಬವಿದ್ದಲ್ಲಿ ಅದು ಮೊದಲ ನಾಲ್ಕು ತಿಂಗಳುಗಳಿಗೆ ಶೇಕಡಾ ಒಂದರ ದರದಲ್ಲಿ ಹಾಗೂ ನಂತರದ ನಾಲ್ಕು ತಿಂಗಳುಗಳಿಗೆ ಶೇಕಡಾ ಎರಡರ ದರದಲ್ಲಿ ದಂಡವನ್ನು ಆಕರ್ಷಿಸುವುದು. ಈ ರೀತಿಯಾಗಿ ಪ್ರತಿಯೊಂದು ಮಂಜೂರಾತಿಯೂ ಕೂಡ, ಮಂಜೂರಾತಿಯ ದಿನಾಂಕದಿಂದ ಇಪ್ಪತ್ತನಾಲ್ಕು ತಿಂಗಳುಗಳು ಕಳೆದನಂತರ ಅನೂರ್ಜಿತಗೊಳ್ಳುವುದು. ಮುಂದುವರೆದು, ದಂಡವನ್ನು ರಾಜ್ಯ ಸಂಪರ್ಕಸೇತು ಸಂಸ್ಥೆಗೆ ನೀಡಲಾಗುವಂತಹ ಸೇವಾ ಶುಲ್ಕಗಳಿಂದ ಕಡಿದುಕೊಳ್ಳಲಾಗುವುದು ಮತ್ತು ಕೇಂದ್ರ ಹಣಕಾಸು ಸಹಾಯಧನದಿಂದ ಆಗಿರುವುದಿಲ್ಲ ಎಂಬುದಾಗಿಯೂ ಮಂಜೂರಾತಿಯು ತಿಳಿಸಿದ್ದಿತು.

**3.1.2** ರಾಜ್ಯದಲ್ಲಿ ಸೌರ ನೀರು ಎತ್ತುವ ಪಂಪು ಸರಬರಾಜಿಗಾಗಿ ಯೋಜನೆಯನ್ನು ಮೂರು ಸಂಸ್ಥೆಗಳು ಕಾರ್ಯಗತಗೊಳಿಸಿದ್ದವು. ಸೌರ ನೀರು ಎತ್ತುವ ಪಂಪು ಸರಬರಾಜಿಗಾಗಿ ಯೋಜನೆಯನ್ನು ಕಾರ್ಯಗತಗೊಳಿಸಿದ ಸಂಸ್ಥೆವಾರು ಸಂಖ್ಯೆಯನ್ನು ಈ ಕೆಳಗೆ ನೀಡಲಾಗಿರುವುದು:

**ಕೋಷ್ಟಕ ಸಂಖ್ಯೆ 3.1: ರಾಜ್ಯದಲ್ಲಿ ಸೌರ ನೀರು ಎತ್ತುವ ಪಂಪು ಸರಬರಾಜಿಗಾಗಿ ಯೋಜನೆಯನ್ನು ಕಾರ್ಯಗತಗೊಳಿಸಿರುವುದಕ್ಕೆ ಸಂಬಂಧಿತ ವಿವರಗಳು**

| ಕ್ರಮ ಸಂಖ್ಯೆ | ನವೀನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯವು ಮಂಜೂರಾತಿ ನೀಡಿದ ದಿನಾಂಕ | ಮಂಜೂರಾತಿ ನೀಡಲಾಗಿದ್ದಂತಹ ಸಂಖ್ಯೆಗಳು | ಕಾರ್ಯಗತಗೊಳಿಸುವ ಸಂಸ್ಥೆ | | | ಒಟ್ಟು |
|---|---|---|---|---|---|---|
| | | | ಕನಇಅನಿ | ಬೆಂವಿಸಕಂ | ಕೃಷಿ ಇಲಾಖೆ | |
| 1 | 29.12.2014 | 5,225 | 1,009 | 310 | 198 | **1,517** |
| 2 | 29.09.2016 | 3,000 | 2,429 | – | – | **2,429** |
| 3 | 10.11.2017 | 1,500 | 272 | – | – | **272** |
| **ಒಟ್ಟು** | | **9,725** | **3,710** | **310** | **198** | **4,218** |
| **ಮಂಜೂರಾತಿಗೆ ಪ್ರತಿಯಾಗಿ ಕಾರ್ಯಗತಗೊಳಿಸಿದ್ದರ ಶೇಕಡಾವಾರು ಸಂಖ್ಯೆ** | | | **38.14** | **3.19** | **2.04** | **43.37** |

ಯೋಜನಾ ಅವಧಿಯಲ್ಲಿ (2014–19), ನವೀನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯವು ಮಂಜೂರು ಮಾಡಿದ್ದಂತಹ 9,725 ಸೌರ ನೀರು ಎತ್ತುವ ಪಂಪುಗಳ ಪೈಕಿ ರಾಜ್ಯದಲ್ಲಿ ಕೇವಲ 4,218 (ಶೇಕಡಾ 43.37) ಸೌರ ನೀರು ಎತ್ತುವ ಪಂಪುಗಳನ್ನು ಮಾತ್ರ ಯಶಸ್ವಿಯಾಗಿ ಸ್ಥಾಪಿಸಲಾಗಿದ್ದಿತು. ಕಂಪನಿಯು 5,507 ಸೌರ ನೀರು ಎತ್ತುವ ಪಂಪುಗಳನ್ನು ಸ್ಥಾಪಿಸುವಲ್ಲಿ ವಿಫಲಗೊಂಡಿದ್ದಿತು, ಅದನ್ನು ಸಂಭಾವ್ಯ ಫಲಾನುಭವಿಗಳು ನೀರಾವರಿಗಾಗಿ ಉಪಯೋಗಿಸಿಕೊಳ್ಳಬಹುದಾಗಿದ್ದಿತು.

**3.1.3** ನವೀನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯವು ಮಂಜೂರು ಮಾಡಿದ್ದಂತಹ 9,725 ಸೌರ ನೀರು ಎತ್ತುವ ಪಂಪುಗಳಿಗೆ ಪ್ರತಿಯಾಗಿ, ಕರ್ನಾಟಕ ಸರ್ಕಾರದಿಂದ ಲಭ್ಯವಿದ್ದಂತಹ ಹಣಕಾಸಿನ ಆಧಾರದ ಮೇರೆಗೆ ಕೇವಲ 4,453 ಸೌರ ನೀರು ಎತ್ತುವ ಪಂಪುಗಳಿಗಾಗಿ ಮಾತ್ರ ಕಂಪನಿಯು ಟೆಂಡರುಗಳನ್ನು ಆಹ್ವಾನಿಸಿದ್ದಿತು. ಕಾಮಗಾರಿ ಆದೇಶಗಳನ್ನು ನೀಡಲಾಗಿದ್ದಂತಹ 4,065 ಸೌರ ನೀರು ಎತ್ತುವ ಪಂಪುಗಳಿಗೆ ಪ್ರತಿಯಾಗಿ ಕೇವಲ 3,710 ಸೌರ ನೀರು ಎತ್ತುವ ಪಂಪುಗಳನ್ನು ಮಾತ್ರ ಸ್ಥಾಪಿಸಲಾಗಿದ್ದಿತು.

ಟೆಂಡರುಗಳನ್ನು ಅಂತಿಮ ರೂಪಕ್ಕೆ ತರುವಲ್ಲಿ (ಸೌರ ನೀರು ಎತ್ತುವ ಪಂಪುಗಳ ಸರಬರಾಜಿಗಾಗಿ) ಹಾಗೂ ಫಲಾನುಭವಿಗಳನ್ನು ಗುರುತಿಸುವಲ್ಲಿ ವಿಳಂಬಗಳಾಗಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕಂಪನಿಯು ನಾಲ್ಕು ಹಂತಗಳ ಪ್ರತಿಯೊಂದಕ್ಕೂ ಟೆಂಡರುಗಳನ್ನು ಅಂತಿಮರೂಪಕ್ಕೆ ತರುವಲ್ಲಿ ಒಂದು ಗಮನಾರ್ಹವಾದಂತಹ ಸಮಯವನ್ನು ತೆಗೆದುಕೊಂಡಿದ್ದಿತು (ಅಂದರೆ ಸರಾಸರಿ 10 ತಿಂಗಳು[75]). ಹಂತ Iನ್ನು ಹೊರತುಪಡಿಸಿದಂತೆ, ಸರಬರಾಜುದಾರರುಗಳೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡನಂತರವಷ್ಟೇ ಕಂಪನಿಯು ಫಲಾನುಭವಿಗಳನ್ನು ಗುರುತಿಸುವ ಸಲುವಾಗಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳನ್ನು ಸಂಪರ್ಕಿಸಿದ್ದಿತು. ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳನ್ನು ಸಂಪರ್ಕಿಸುವಲ್ಲಿ ವಿಳಂಬವು 51 ದಿನಗಳಿಂದ (ಹಂತ – II) 422 ದಿನಗಳವರೆಗೆ (ಹಂತ– IV) ಆಗಿದ್ದಿತು (***ಅನುಬಂಧ–33***).

**3.1.4** 3,710 ಫಲಾನುಭವಿಗಳಿಗಾಗಿ ಐದು ವರ್ಷಗಳ ಅವಧಿಗೆ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಕಂಪನಿಯ ವರಮಾನ ಮತ್ತು ವೆಚ್ಚದ ಸಂಕ್ಷಿಪ್ತ ವಿವರಗಳನ್ನು ಈ ಕೆಳಗಿನ ಕೋಷ್ಟಕವು ತಿಳಿಸುತ್ತದೆ.

**ಕೋಷ್ಟಕ ಸಂಖ್ಯೆ 3.2: ಯೋಜನೆಯ ಕಾರ್ಯಗತಗೊಳಿಸುವಲ್ಲಿನ ಸ್ವೀಕೃತಿಗಳು ಮತ್ತು ಪಾವತಿಗಳನ್ನು ತೋರಿಸುವ ತಃಖ್ತೆ**

| ಕ್ರಮ ಸಂಖ್ಯೆ | ವಿವರಗಳು | ಮೊತ್ತ (ರೂಪಾಯಿಗಳು ಕೋಟಿಯಲ್ಲಿ) | ಒಟ್ಟಾರೆ ವೆಚ್ಚಕ್ಕೆ ಹೋಲಿಸಿದಲ್ಲಿ ಶೇಕಡಾವಾರು |
|---|---|---|---|
| 1 | ಸ್ವೀಕರಿಸಲಾದಂತಹ ಕೇಂದ್ರ ಹಣಕಾಸು ಸಹಾಯ | 52.29 | 34.82 |
| 2 | ಸ್ವೀಕರಿಸಲಾದಂತಹ ರಾಜ್ಯ ಹಣಕಾಸು ಸಹಾಯ | 66.80 | 44.48 |
| 3 | ಫಲಾನುಭವಿಗಳಿಂದ ಸ್ವೀಕರಿಸಲಾದಂತಹ ಕಾಣಿಕೆ | 30.08 | 20.02 |
| 4 | ಒಟ್ಟು ಸ್ವೀಕೃತಿಗಳು | 149.17 | 99.32 |
| 5 | ಭರಿಸಲಾಗಿದ್ದಂತಹ ವೆಚ್ಚಗಳು | 150.19 | |
| 6 | ನಿವ್ವಳ ಮಿಗುತಾಯಗಳು/(ಕೊರತೆ) | (1.02) | (0.68) |

ಕಂಪನಿಯು ನವೀನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದಿಂದ ₹53.90 ಕೋಟಿ ಮೊತ್ತದಷ್ಟು ಕೇಂದ್ರ ಹಣಕಾಸು ಸಹಾಯಧನವನ್ನು ಕೋರಿದ್ದಿತು, ಇದಕ್ಕೆ ಪ್ರತಿಯಾಗಿ ಕಂಪನಿಯು ₹1.62 ಕೋಟಿ ಮೊತ್ತದಷ್ಟು ಸೇವಾ ಶುಲ್ಕಗಳನ್ನು ಸ್ವೀಕರಿಸಬೇಕಿದ್ದಿತು. ಆದಾಗ್ಯೂ, ಕಂಪನಿಯು ನವೀನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದಿಂದ ಅಂತಿಮ ಇತ್ಯರ್ಥವಾಗಿ ₹52.29 ಕೋಟಿ ಮೊತ್ತವನ್ನು ಮಾತ್ರ ಸ್ವೀಕರಿಸಿದ್ದಿತು. ಮುಂದುವರೆದು, ಸೌರ ನೀರು ಎತ್ತುವ ಪಂಪುಗಳ ಸ್ಥಾಪನೆಯಲ್ಲಿನ ವಿಳಂಬಕ್ಕಾಗಿ ನವೀನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯವು ₹0.92 ಕೋಟಿ ಮೊತ್ತದಷ್ಟು ದಂಡ ವಿಧಿಸಿತು, ಇದು ₹1.02 ಕೋಟಿ ಮೊತ್ತದ ಕೊರತೆ/ನಷ್ಟದಲ್ಲಿ ಪರಿಣಮಿಸಿದ್ದಿತು.

ನವೀನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯವು ಸೌರ ನೀರು ಎತ್ತುವ ಪಂಪುಗಳ ಮಾನದಂಡ (ಬೆಂಚು ಮಾರ್ಕು) ಮೌಲ್ಯವನ್ನು ಡಿಸಿ ಮೋಟಾರುಗಳಿಗೆ ಎಚ್‌ಪಿ ಒಂದಕ್ಕೆ ₹77,000/– ದಂತೆ ಹಾಗೂ ಎಸಿ ಮೋಟಾರುಗಳಿಗೆ ಎಚ್‌ಪಿ ಒಂದಕ್ಕೆ ₹65,000/–ದಂತೆ ಜೂನ್ 2018ರಿಂದ

[75] **ಹಂತ–I**: 279 ದಿನಗಳು; **ಹಂತ–II**: 322 ದಿನಗಳು; **ಹಂತ–III**: 300 ದಿನಗಳು ಮತ್ತು **ಹಂತ–IV**: 289 ದಿನಗಳು.

ಜಾರಿಗೆ ಬಂದಂತೆ ಪರಿಷ್ಕರಿಸಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ಕಂಪನಿಯು ಕೇಂದ್ರ ಹಣಕಾಸು ಸಹಾಯಧನವನ್ನು ಪರಿಷ್ಕರಣಾಪೂರ್ವ ದರಗಳಲ್ಲಿ ಕೋರುವುದನ್ನು ಮುಂದುವರೆಸಿದ್ದಿತು, ಇದು ಈ ಕೆಳಗೆ ವಿವರಿಸಿರುವಂತೆ 1,075 ಸೌರ ನೀರು ಎತ್ತುವ ಪಂಪುಗಳಿಗೆ (4ನೇ ಹಂತ) ₹2.05 ಕೋಟಿ ಮೊತ್ತದಷ್ಟು ಅಧಿಕ ಪ್ರಮಾಣದಲ್ಲಿ ಕೋರುವಲ್ಲಿ ಪರಿಣಮಿಸಿದ್ದಿತು.

**ಕೋಷ್ಟಕ ಸಂಖ್ಯೆ 3.3: ಕೇಂದ್ರ ಹಣಕಾಸು ಸಹಾಯಧನವನ್ನು ಅಧಿಕ ಪ್ರಮಾಣದಲ್ಲಿ ಕೋರಲಾಗಿದ್ದುದು**

| ಪಂಪಿನ ಸಾಮರ್ಥ್ಯ | ಸ್ಥಾಪಿತ ಪಂಪುಗಳ ಸಂಖ್ಯೆ | ಪರಿಷ್ಕೃತ ಮಾನದಂಡ (ಬೆಂಚು ಮಾರ್ಕು) ಮೌಲ್ಯ ರೂಪಾಯಿಗಳು | ಅನುಮತಿಸಲಾಗಿದ್ದಂತಹ ಕೇಂದ್ರ ಹಣಕಾಸು ಸಹಾಯಧನ ಶೇಕಡಾ 20ರ ದರದಲ್ಲಿ ರೂಪಾಯಿಗಳು | ಕೋರಲಾಗಿದ್ದಂತಹ ಕೇಂದ್ರ ಹಣಕಾಸು ಸಹಾಯಧನ ರೂಪಾಯಿಗಳು | ಅಧಿಕ ಪ್ರಮಾಣದಲ್ಲಿ ಕೋರಲಾಗಿದ್ದಂತಹ ಕೇಂದ್ರ ಹಣಕಾಸು ಸಹಾಯಧನ ರೂಪಾಯಿಗಳು |
|---|---|---|---|---|---|
| 5 ಎಚ್‌ಪಿ ಎಸಿ | 593 | 3,25,000 | 65,000 | 85,000 | 1,18,60,000 |
| 5 ಎಚ್‌ಪಿ ಡಿಸಿ | 482 | 3,85,000 | 77,000 | 95,000 | 86,76,000 |
| **ಒಟ್ಟು** | **1075** | | | | **2,05,36,000** |

ಯೋಜನೆಯ ಷರತ್ತುಗಳ ಅನುಸಾರ, ಉಳಿಕೆ ಮೊತ್ತವನ್ನು (ನಿವ್ವಳ ಕೊರತೆಯ ಮೊತ್ತ) ರಾಜ್ಯ ಸರ್ಕಾರವು ಭರಿಸುವ ಅಗತ್ಯತೆಯಿದ್ದಿತು. ಮುಂದುವರೆದು, ಸೌರ ನೀರು ಎತ್ತುವ ಪಂಪುಗಳ ಸರಬರಾಜುದಾರರುಗಳಿಗೆ ಪಾವತಿಸಬೇಕಿದ್ದಂತಹ ₹ 2.20 ಕೋಟಿ ಮೊತ್ತವು ಇತ್ಯರ್ಥಗೊಳ್ಳದೆಯೇ ಉಳಿದಿದ್ದಿತು (ಫೆಬ್ರವರಿ 2023).

ಈ ರೀತಿಯಾಗಿ ಕಂಪನಿಯು ಕೇಂದ್ರ ಹಣಕಾಸು ಸಹಾಯಧನದ ಹೆಚ್ಚುವರಿ ಕೋರಿಕೆ, ಸೇವಾ ಶುಲ್ಕಗಳ ಕಡಿಮೆ ವಸೂಲಾತಿ ಮತ್ತು ಕಾರ್ಯಗತ ಗೊಳಿಸುವಲ್ಲಿನ ವಿಳಂಬಕ್ಕೆ ದಂಡದ ಕಾರಣ ಕಾರ್ಯಕ್ರಮದ ಕಾರ್ಯಗತಗೊಳಿಸುವಿಕೆಯಲ್ಲಿ ₹2.64 ಕೋಟಿ ಮೊತ್ತದಷ್ಟು (₹1.62 ಕೋಟಿ ಮೊತ್ತದ ನಿರೀಕ್ಷಿತ ಮಿಗುತಾಯ ಹಾಗೂ ಮೇಲೆ ತಿಳಿಸಲಾದಂತೆ ₹1.02 ಕೋಟಿ ನಿವ್ವಳ ಕೊರತೆಯ ನಡುವಿನ ವ್ಯತ್ಯಾಸ) ಒಂದು ನಿವ್ವಳ ನಷ್ಟ ಅನುಭವಿಸಿತು.

ಈ ರೀತಿಯಾಗಿ ಕಾರ್ಯಕ್ರಮವನ್ನು ವಿಳಂಬವಾಗಿ ಹಾಗೂ ಅಪೂರ್ಣವಾಗಿ ಕಾರ್ಯಗತಗೊಳಿಸಿದ್ದರಿಂದ ಸೌರ ನೀರು ಎತ್ತುವ ಪಂಪುಗಳ ಪ್ರಯೋಜನಗಳನ್ನು ಕೆಲವೇ ಕೆಲವು ಫಲಾನುಭವಿಗಳು ಪಡೆದುಕೊಳ್ಳುವಲ್ಲಿ ಸಾಧ್ಯವಾಯಿತು ಹಾಗೂ ಯೋಜನೆಯ ಉದ್ದೇಶಗಳನ್ನು ಪರಿಪೂರ್ಣವಾಗಿ ಸಾಧಿಸಲಾಗಿರಲಿಲ್ಲ. ಕಂಪನಿಯು ಸೇವಾ ಶುಲ್ಕಗಳನ್ನು ಕಡಿಮೆ ಪ್ರಮಾಣದಲ್ಲಿ ಕೋರಿದ್ದುದು/ಕಡಿಮೆ ಪ್ರಮಾಣದಲ್ಲಿ ಸ್ವೀಕರಿಸಿದ್ದುದು, ವಿಳಂಬಕ್ಕಾಗಿ ನವೀನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯವು ದಂಡವನ್ನು ವಿಧಿಸಿದ್ದುದು ಹಾಗೂ ರಾಜ್ಯ ಸರ್ಕಾರದಿಂದ ಕಾಣಿಕೆಯನ್ನು ಸ್ವೀಕರಿಸದಿದ್ದುದು ಈ ಕಾರಣಗಳಿಂದಾಗಿ ₹2.64 ಕೋಟಿ ಮೊತ್ತದಷ್ಟು ನಷ್ಟವನ್ನು ಅನುಭವಿಸಿದ್ದಿತು.

ಕಂಪನಿಯು, ಯೋಜನೆಯ ಕಾರ್ಯಗತಗೊಳಿಸುವಿಕೆಯು ಕರ್ನಾಟಕ ಸರ್ಕಾರದಿಂದ ಹಣಕಾಸನ್ನು ಸ್ವೀಕರಿಸುವುದರ ಮೇಲೆ, ಫಲಾನುಭವಿಗಳ ತಾಲ್ಲೂಕುವಾರು ಹಂಚಿಕೆ ಹಾಗೂ ಫಲಾನುಭವಿಗಳಿಂದ ಸ್ವೀಕರಿಸಲಾಗುವ ಅರ್ಜಿಗಳ ಸಂಖ್ಯೆ, ಈ ಅಂಶಗಳ ಮೇಲೆ ಅವಲಂಭಿತವಾಗಿದ್ದಿತು ಎಂಬುದಾಗಿ ಉತ್ತರಿಸಿತು (ಜೂನ್ 2023). ಟೆಂಡರುಗಳನ್ನು ಅಂತಿಮಗೊಳಿಸುವಲ್ಲಿನ ವಿಪರೀತವಾದಂತಹ ವಿಳಂಬಕ್ಕೆ ಹಾಗೂ ಫಲಾನುಭವಿಗಳನ್ನು ಗುರುತಿಸುವ ಪ್ರಕ್ರಿಯೆಯನ್ನು ಪ್ರಾರಂಭಗೊಳಿಸುವಲ್ಲಿನ ವಿಳಂಬಕ್ಕೆ ಸಂಬಂಧಿಸಿದಂತೆ ಕಂಪನಿಯು ಯಾವುದೇ ವಿವರಣೆಯನ್ನೂ ನೀಡಲಿಲ್ಲ.

ಈ ವಿಷಯವನ್ನು ಸರ್ಕಾರಕ್ಕೆ ವರದಿ ಮಾಡಲಾಗಿದ್ದಿತು (11 ಏಪ್ರಿಲ್ 2023); ನೆನಪಿಸುವ ಪತ್ರಗಳನ್ನು ಪುನ:ಪುನ: ಕಳುಹಿಸಲಾಗಿದ್ದಿತಾದರೂ ಅವರ ಉತ್ತರ ಈವರೆವಿಗೂ (ಜೂನ್ 2023) ಸ್ವೀಕೃತಿಗೊಂಡಿರುವುದಿಲ್ಲ.

***ಶಿಫಾರಸು 27:***
**ಯೋಜನೆಯು ಗರಿಷ್ಠ ಸಂಖ್ಯೆಯ ಫಲಾನುಭವಿಗಳನ್ನು ತಲಪುವ ಸಲುವಾಗಿ, ಕೇಂದ್ರ ಹಣಕಾಸು ಸಹಯಾಧನವನ್ನು ಉಪಯೋಗಿಸಿಕೊಳ್ಳುವ ಸಲುವಾಗಿ ಹಾಗೂ ನಿರ್ದಿಷ್ಟ ಕಾಲಮಿತಿಯ ಒಳಗೆ ಕಾರ್ಯಗತಗೊಳಿಸುವುದನ್ನು ಮೇಲುಸ್ತುವಾರಿ ಮಾಡುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಸರ್ಕಾರವು ಒಂದು ಸದೃಢ ವ್ಯವಸ್ಥೆಯನ್ನು ರೂಪಿಸಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತಿರುವುದು.**

**ಕರ್ನಾಟಕ ರಾಜ್ಯ ಕರಕುಶಲಗಳ ಅಭಿವೃದ್ಧಿ ನಿಗಮ ನಿಯಮಿತ**

### *3.2 ತಪ್ಪಿಸಬಹುದಾಗಿದ್ದ ವೆಚ್ಚ*

**ಕಟ್ಟಡ ನಿರ್ಮಾಣದಲ್ಲಿನ ವಿಪರೀತವಾದಂತಹ ವಿಳಂಬವು ₹12.78 ಕೋಟಿ ಮೊತ್ತದಷ್ಟು ತಪ್ಪಿಸಬಹುದಾಗಿದ್ದಂತಹ ಬಾಡಿಗೆ ಪಾವತಿಯಲ್ಲಿ ಪರಿಣಮಿಸಿದ್ದಿತು.**

ಕರ್ನಾಟಕ ರಾಜ್ಯ ಕರಕುಶಲಗಳ ಅಭಿವೃದ್ಧಿ ನಿಗಮ ನಿಯಮಿತದ (ಕಂಪನಿ) ಕಾವೇರಿ ಪ್ರದರ್ಶನ ಮಳಿಗೆಯು ಒಂದು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದಿತು ಹಾಗೂ ಕಂಪನಿಯ ಸಾಂಸ್ಥಿಕ ಕಚೇರಿಯು 1989ರಲ್ಲಿ ನಿರ್ಮಿಸಲಾಗಿರುವಂತಹ ತನ್ನ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತಿದ್ದಿತು. ಇವೆರಡೂ ಬೆಂಗಳೂರಿನ ಮಹಾತ್ಮಾ ಗಾಂಧಿ ರಸ್ತೆಯಲ್ಲಿ ಇದ್ದವು. ನಿರ್ದೇಶಕರುಗಳ ಮಂಡಳಿಯು (ಬಿಒಡಿ) ಸಾಂಸ್ಥಿಕ ಕಚೇರಿ ಕಟ್ಟಡವನ್ನು ಸಾಂಸ್ಥಿಕ ಕಚೇರಿ, ಪ್ರದರ್ಶನ ಮಳಿಗೆ ಹಾಗೂ ಕೇಂದ್ರ ಉಗ್ರಾಣಗಳಿಗೆ ಸ್ಥಳಾವಕಾಶ ಮಾಡಿಕೊಡುವ ಸಲುವಾಗಿ ಹಾಗೂ ಬೆಂಗಳೂರಿನ ಮಹಾತ್ಮಾ ಗಾಂಧಿ ರಸ್ತೆಯಲ್ಲಿನ ಬಾಡಿಗೆ ಕಟ್ಟಡವನ್ನು ಖಾಲಿ ಮಾಡುವ ಸಲುವಾಗಿ ಒಂದು ವಾಣಿಜ್ಯ ಸಂಕೀರ್ಣವನ್ನಾಗಿ ಪರಿವರ್ತಿಸುವ ಸಲುವಾಗಿ ನಿರ್ಣಯವನ್ನು ಕೈಗೊಂಡಿತು (ಡಿಸೆಂಬರ್ 2011). ಮೆ. ಸಿಎನ್‌ಟಿ (CnT) ಆರ್ಕಿಟೆಕ್ಟ್ಸ್ (ಸಲಹೆಗಾರರು) ಇವರ ಸೇವೆಯನ್ನು ಒಟ್ಟಾರೆ ಯೋಜನಾ ವೆಚ್ಚದ ಶೇಕಡಾ 4ರ ದರದಲ್ಲಿ ಶುಲ್ಕ ಪಾವತಿಸುವುದರೊಂದಿಗೆ ಉಪಯೋಗಿಸಿಕೊಳ್ಳುವ ಸಲುವಾಗಿ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು (ಡಿಸೆಂಬರ್ 2012). ಒಂದು ಪರಸ್ಪರ ತಿಳಿವಳಿಕೆ ಪತ್ರವನ್ನು (ಎಂಒಯು) ಸಲಹೆಗಾರರೊಂದಿಗೆ ಮಾಡಿಕೊಳ್ಳಲಾಯಿತು (ಆಗಸ್ಟ್ 2014), ಅದರ ಅನುಸಾರ, ಸಲಹೆಗಾರರು ಸವಿವರ ಅಂದಾಜುಗಳು, ಸವಾಲು ದಾಖಲೆಗಳನ್ನು ತಯಾರಿಸುವುದನ್ನು ಒಳಗೊಂಡಿದ್ದಿತು ಹಾಗೂ ಯೋಜನೆಯು ಪೂರ್ಣಗೊಳ್ಳುವವರೆವಿಗೂ ಕಾಮಗಾರಿಯನ್ನು ಕಾರ್ಯಗತಗೊಳಿಸಬೇಕಾದ ವಿನ್ಯಾಸ/ರೂಪುರೇಖೆಗಳು ಮತ್ತು ನಿರ್ದಿಷ್ಟನಿರೂಪಣೆಗಳ ಅನುಸಾರ ಕಾರ್ಯಗತಗೊಳಿಸುವುದನ್ನು ಖಚಿತಪಡಿಸಿಕೊಳ್ಳುವುದನ್ನು, ಗುತ್ತಿಗೆದಾರರುಗಳ ಬಿಲ್ಲುಗಳನ್ನು ಪ್ರಮಾಣೀಕರಿಸುವುದು, ಇತ್ಯಾದಿಗಳನ್ನು ಒಳಗೊಂಡಿದ್ದಿತು.

ಸಲಹೆಗಾರರು ಪ್ರಸಕ್ತ ಇದ್ದಂತಹ 15,708 ಚದರ ಅಡಿಗಳಿಂದ 21,196 ಚದರ ಅಡಿಗಳಿಗೆ ನಿರ್ಮಿತ ಪ್ರದೇಶವನ್ನು ಹೆಚ್ಚಳಗೊಳಿಸುವ ನಿರ್ಮಾಣವನ್ನು ಒಳಗೊಂಡಂತೆ ಪ್ರಸಕ್ತ ಇರುವಂತಹ ಕಟ್ಟಡವನ್ನು ನವೀಕರಿಸುವ ಸಲುವಾಗಿ ₹5.94 ಕೋಟಿ ಪೂರ್ವಭಾವಿ ವೆಚ್ಚಕ್ಕೆ ಅಂದಾಜನ್ನು ಸಲ್ಲಿಸಿದರು (ನವೆಂಬರ್ 2014). ಇದಕ್ಕೆ ನಿರ್ದೇಶಕರುಗಳ ಮಂಡಳಿಯು ಅನುಮೋದನೆ ನೀಡಿತು (ಡಿಸೆಂಬರ್ 2014).

ಕಂಪನಿಯು ಕರ್ನಾಟಕ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಯವರಿಗೆ ಒಂದು ಪತ್ರವನ್ನು ಬರೆಯಿತು (ಅಕ್ಟೋಬರ್ 2016) ಹಾಗೂ ಬೃಹತ್ ಬೆಂಗಳೂರು ಮಹಾನಗರ

ಪಾಲಿಕೆಯಿಂದ ಕಟ್ಟಡದ ವಿನ್ಯಾಸಕ್ಕೆ ಅನುಮೋದನೆಯು ಅಂತಿಮ ಹಂತದಲ್ಲಿರುವುದು ಮತ್ತು ಕಟ್ಟಡ ವಿನ್ಯಾಸಕ್ಕೆ ಅನುಮೋದನೆ ದೊರೆತಕೂಡಲೆಯೇ ಕಟ್ಟಡದ ನವೀಕರಣಕ್ಕಾಗಿ ಟೆಂಡರುಗಳನ್ನು ಆಹ್ವಾನಿಸಲಾಗುವುದು ಎಂಬುದಾಗಿ ಹಾಗೂ ವೆಚ್ಚವನ್ನು ತನ್ನ ಸ್ವಂತ ವರಮಾನ ಮೂಲಗಳಿಂದ ಭರಿಸಲಾಗುವುದಾಗಿಯೂ ತಿಳಿಸಿ, ₹6.50 ಕೋಟಿ ಅಂದಾಜು ವೆಚ್ಚದಲ್ಲಿ ಸಾಂಸ್ಥಿಕ ಕಚೇರಿ ಕಟ್ಟಡವನ್ನು ಒಂದು ವಾಣಿಜ್ಯ ಸಂಕೀರ್ಣವನ್ನಾಗಿ ಪರಿವರ್ತಿಸುವ ಸಲುವಾಗಿನ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ಕೋರಿದರು. ಕರ್ನಾಟಕ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಯವರು, ಒಂದು ತಾಂತ್ರಿಕ ಸಮಿತಿಯನ್ನು ರಚಿಸುವಂತೆ ಹಾಗೂ ಅಂದಾಜುಗಳನ್ನು ಮತ್ತು ರೂಪುರೇಷೆ ವಿನ್ಯಾಸಗಳನ್ನು ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆಗಳನ್ನು ಪಡೆದುಕೊಂಡ ನಂತರ ಸಲ್ಲಿಸುವಂತೆ ಕಂಪನಿಗೆ ನಿರ್ದೇಶಿಸಿದರು (ಡಿಸೆಂಬರ್ 2016). ಅನೇಕ ಪತ್ರ ವ್ಯವಹಾರಗಳ ನಂತರ ಕರ್ನಾಟಕ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಯವರು ಕಂಪನಿಯು ಕಟ್ಟಡ ನಿರ್ಮಾಣವನ್ನು ತನ್ನ ಕಂಪನಿಯ ನಿಯಮ–ನಿಬಂಧನೆಗಳ ಅನುಸಾರ ಕೈಗೆತ್ತಿಕೊಳ್ಳುವಂತೆ ತಿಳಿಸಿದರು (ಜನವರಿ 2018).

ಕಂಪನಿಯು ಇದೇ ವೇಳೆಯಲ್ಲಿ ಕರ್ನಾಟಕ ಸರ್ಕಾರದ ಒಂದು ಉದ್ದಿಮೆಯಾಗಿರುವ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (ಕೆಆರ್ಐಡಿಎಲ್) ಇವರಿಗೆ ಲೋಕೋಪಯೋಗಿ ಇಲಾಖೆ ದರಪಟ್ಟಿ 2016ರ ಅನುಸಾರ ಒಂದು ಅಂದಾಜುಪಟ್ಟಿಯನ್ನು ತಯಾರಿಸಿರುವಂತೆ ಕೋರಿತು (6 ಜನವರಿ 2017). ಕೆಆರ್ಐಡಿಎಲ್ ಅಂದಾಜುಗಳನ್ನು ಎರಡು ಪ್ಯಾಕೇಜುಗಳಲ್ಲಿ, ಕಾಮಗಾರಿಯನ್ನು ವಿಭಜಿಸುವ ಮೂಲಕ (ನೆಲ ಅಂತಸ್ಥಿಗೆ, ಮೊದಲ ಅಂತಸ್ಥಿಗೆ ಮತ್ತು ಎರಡನೇ ಅಂತಸ್ಥಿಗೆ ಮೊದಲ ಪ್ಯಾಕೇಜ್ ಆಗಿ ₹1.99 ಕೋಟಿ ಹಾಗೂ ಮೂರನೇ ಅಂತಸ್ಥಿಗೆ ಹಾಗೂ ತಾರಸಿ ಕಾಮಗಾರಿಗಳಿಗೆ ಎರಡನೇ ಪ್ಯಾಕೇಜು[76] ಆಗಿ ₹0.71 ಕೋಟಿ) ಅಂದಾಜುಗಳನ್ನು ತಯಾರಿಸಿತು. ನಿರ್ದೇಶಕರುಗಳ ಮಂಡಳಿಯು ಸಾಂಸ್ಥಿಕ ಕಚೇರಿಯನ್ನು ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಯುನೈಟೆಡ್ ಮ್ಯಾನ್ಷನ್ ಕಟ್ಟಡಕ್ಕೆ ಬಾಡಿಗೆ ಆಧಾರದ ಮೇರೆಗೆ ಸ್ಥಳಾಂತರಿಸುವ ನಿರ್ಣಯವನ್ನು ಕೈಗೊಂಡಿತು (ಜನವರಿ 2017) ಹಾಗೂ ಕೆಆರ್ಐಡಿಎಲ್ ತಯಾರಿಸಿದ್ದಂತಹ ₹1.99 ಕೋಟಿ ಮೊತ್ತದ ಅಂದಾಜಿಗೆ (ಮೊದಲ ಪ್ಯಾಕೇಜ್) ನವೀಕರಣ ಕಾಮಗಾರಿಗಳಿಗಾಗಿ ಅನುಮೋದನೆ ನೀಡಿತು ಹಾಗೂ ನವೀಕರಣ ಕಾಮಗಾರಿಗಳನ್ನು ಕೆಆರ್ಐಡಿಎಲ್ ಅಥವಾ ನಿರ್ಮಿತಿ ಕೇಂದ್ರಕ್ಕೆ ವಹಿಸಿಕೊಡುವ ತೀರ್ಮಾನವನ್ನು ತೆಗೆದುಕೊಂಡಿತು. ಕೆಆರ್ಐಡಿಎಲ್‌ನೊಂದಿಗೆ ನವೀಕರಣ ಕಾಮಗಾರಿಗಳಿಗಾಗಿ (ಮೊದಲ ಪ್ಯಾಕೇಜ್) ಒಂದು ಪರಸ್ಪರ ತಿಳುವಳಿಕೆ ಪತ್ರವನ್ನು (ಎಂಒಯು) ಮಾಡಿಕೊಳ್ಳಲಾಯಿತು (ಆಗಸ್ಟ್ 2017). ಕಾಮಗಾರಿಯನ್ನು ಕಟ್ಟಡವನ್ನು ವಹಿಸಿಕೊಟ್ಟಂತಹ ದಿನಾಂಕದಿಂದ ಆರು ತಿಂಗಳುಗಳ ಒಳಗೆ ಪೂರ್ಣಗೊಳಿಸುವ ಅಗತ್ಯತೆ ಇದ್ದಿತು. ಕಟ್ಟಡವನ್ನು ಕೆಆರ್ಐಡಿಎಲ್‌ಗೆ 01 ಫೆಬ್ರವರಿ 2018ರಂದು ವಹಿಸಿಕೊಡಲಾಯಿತು ಮತ್ತು ಆದ್ದರಿಂದ ಕಾಮಗಾರಿಯನ್ನು ಪೂರ್ಣಗೊಳಿಸಲು ನಿರ್ಧಿಷ್ಟ ದಿನಾಂಕವು 31 ಜುಲೈ 2018 ಆಗಿದ್ದಿತು. ಎರಡನೆಯ ಪರಸ್ಪರ ತಿಳುವಳಿಕೆ ಪತ್ರವನ್ನು ಮೂರನೇ ಅಂತಸ್ತು ಮತ್ತು ತಾರಸಿ ಕಾಮಗಾರಿಗಳಿಗಾಗಿ (ಎರಡನೇ ಪ್ಯಾಕೇಜು) ಕಂಪನಿ ಮತ್ತು ಕೆಆರ್ಐಡಿಎಲ್, ಇವುಗಳ ನಡುವೆ ₹0.71 ಕೋಟಿ ಅಂದಾಜಿಗೆ ಮಾಡಿಕೊಳ್ಳಲಾಯಿತು (ಜೂನ್ 2020). ಕಾಮಗಾರಿಯನ್ನು ಪೂರ್ಣಗೊಳಿಸಲು ನಿರ್ಧಿಷ್ಟ ಕಾಲಾವಧಿಯು ಆರು ತಿಂಗಳುಗಳು ಆಗಿದ್ದಿತು ಮತ್ತು ಅದರಂತೆಯೇ, ಕಾಮಗಾರಿಯನ್ನು 16 ಡಿಸೆಂಬರ್ 2020ರ ವೇಳೆಗೆ ಪೂರ್ಣಗೊಳಿಸಬೇಕಿದ್ದಿತು. 1ನೇ ಪ್ಯಾಕೇಜು ಮತ್ತು 2ನೇ ಪ್ಯಾಕೇಜಿಗೆ ಸಂಬಂಧಿತ ಕಾಮಗಾರಿಯನ್ನು ಇನ್ನೂ ಪೂರ್ಣಗೊಳಿಸಬೇಕಾಗಿರುತ್ತದೆ (ಮಾರ್ಚ್ 2022).

[76] ಆಂತರಿಕ ಅಲಂಕರಣಗಳಿಗೆ ಸಂಬಂಧಿತ ಮೌಲ್ಯವನ್ನು ಈ ಎರಡು ಪ್ಯಾಕೇಜುಗಳಲ್ಲಿ ಸೇರಿಸಿರಲಿಲ್ಲ.

ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರು, ಕೆಆರ್‌ಐಡಿಎಲ್, ಇವರು ₹1.99 ಕೋಟಿಯ ಪೈಕಿ ₹1.45 ಕೋಟಿ ಮೌಲ್ಯದ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಅಂದಾಜುಗಳು (ಕೆಆರ್‌ಐಡಿಎಲ್ ತಯಾರಿಸಿರುವುದು) ನೆಲ, ಫಾಲ್ಸ್ ಸೀಲಿಂಗ್, ವಾಲ್ ಕ್ಲಾಡಿಂಗ್, ವಿದ್ಯುತೀಕರಣ ಮತ್ತು ನೀರು ಸರಬರಾಜು, ಲಿಫ್ಟ್, ಅಗ್ನಿಶಾಮಕ, ಜನರೇಟರ್, ಹೆಚ್ಚುವರಿ ಲಿಫ್ಟ್, ದೂರವಾಣಿ, ಎಲ್‌ಎಎನ್ (LAN) ಸಂಪರ್ಕ, ಸಾರ್ವಜನಿಕ ಪ್ರಕಟಣೆ ವ್ಯವಸ್ಥೆ ಇತ್ಯಾದಿಗಳನ್ನು ಒಳಗೊಂಡಿರುವುದಿಲ್ಲ ಎಂಬುದಾಗಿ ತಿಳಿಸಿದರು (ನವೆಂಬರ್ 2020). ಕಂಪನಿಯು ಕಟ್ಟಡದ ಬಾಕಿ ಕಾಮಗಾರಿಗಳಿಗಾಗಿ ಅಂದಾಜುಗಳನ್ನು ತಯಾರಿಸಿಕೊಡುವಂತೆ ಬೆಂಗಳೂರು ಮಹಾನಗರ ಸಾರಿಗೆ ನಿಗಮವನ್ನು (ಬಿಎಂಟಿಸಿ) ಕೋರಿತು (ಡಿಸೆಂಬರ್ 2021). ಅದರಂತೆ, ಬೆಂಗಳೂರು ಮಹಾನಗರ ಸಾರಿಗೆ ನಿಗಮವು ತನ್ನ ಅಂದಾಜು ವೆಚ್ಚವನ್ನು ಉಳಿದ ಸಿವಿಲ್ ಕಾಮಗಾರಿಗಳಿಗಾಗಿ ₹3.91 ಕೋಟಿಗೆ ಸಲ್ಲಿಸಿತು. ಉಳಿಕೆ ಸಿವಿಲ್ ಕಾಮಗಾರಿಗಳನ್ನು ಬೆಂಗಳೂರು ಮಹಾನಗರ ಸಾರಿಗೆ ನಿಗಮಕ್ಕೆ ವಹಿಸಿಕೊಡಲು ನಿರ್ದೇಶಕರುಗಳ ಮಂಡಳಿಯು ತೀರ್ಮಾನಿಸಿತು (ಮೇ 2022). ಬೆಂಗಳೂರು ಮಹಾನಗರ ಸಾರಿಗೆ ನಿಗಮವು ಉಳಿಕೆ ಕಾಮಗಾರಿಯನ್ನು ಒರ್ವ ಗುತ್ತಿಗೆದಾರರಿಗೆ ಗುತ್ತಿಗೆ ಮೊತ್ತ ₹2.66 ಕೋಟಿಗೆ, ಜಿಎಸ್‌ಟಿ ಹೊರತುಪಡಿಸಿದಂತೆ, 2021–22ರ ದರಪಟ್ಟಿಯಲ್ಲಿನ ದರಕ್ಕಿಂತ ಶೇ. 14.70 ಕಡಿಮೆ ಮೌಲ್ಯಕ್ಕೆ ನೀಡಿದ್ದಿತು (ಮಾರ್ಚ್ 2023).

ಈ ನಿಟ್ಟಿನಲ್ಲಿ ಲೆಕ್ಕ ಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು.

i. **ಆಡಳಿತಾತ್ಮಕ ಅನುಮೋದನೆ ಪಡೆದುಕೊಳ್ಳುವಲ್ಲಿನ ವಿಳಂಬ:** ಆಡಳಿತಾತ್ಮಕ ಅನುಮೋದನೆ ಪಡೆದುಕೊಳ್ಳುವಲ್ಲಿನ ಪ್ರಕ್ರಿಯೆಯು 16 ತಿಂಗಳುಗಳನ್ನು ತೆಗೆದುಕೊಂಡಿತು (ಅಕ್ಟೋಬರ್ 2016ರಿಂದ ಜನವರಿ 2018), ಅದರಿಂದಾಗಿ ಕಾಮಗಾರಿ ಪ್ರಾರಂಭಗೊಳ್ಳುವಲ್ಲಿ ವಿಳಂಬಗೊಂಡಿತು.

ii. **ಕಾಮಗಾರಿಯನ್ನು ವಿಭಜಿಸಿದ್ದು:** ಕರ್ನಾಟಕ ಸರ್ಕಾರವು ರೂಪಾಯಿಗಳು ಎರಡು ಕೋಟಿಯವರೆವಿಗೂ ಕಾಮಗಾರಿಗಳನ್ನು ಕೆಆರ್‌ಐಡಿಎಲ್‌ಗೆ ನೇರವಾಗಿ ವಹಿಸಿಕೊಡುವ ಸಲುವಾಗಿ ಸಾರ್ವಜನಿಕ ವಲಯ ಉದ್ದಿಮೆಗಳು, ಕಂಪನಿಗಳು, ಇಲಾಖೆಗಳು ಮುಂತಾದವುಗಳಿಗೆ ಕರ್ನಾಟಕ ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅದಿನಿಯಮದ ಪರಿಚ್ಛೇದ 4(ಜಿ) ಅಡಿಯಲ್ಲಿ ಟೆಂಡರುಗಳನ್ನು ಆಹ್ವಾನಿಸುವುದರಿಂದ ವಿನಾಯಿತಿಯನ್ನು ನೀಡಿದ್ದಿತು. ಆದಾಗ್ಯೂ, ಯಾವುದೇ ಕಾಮಗಾರಿಯನ್ನು ವಿಭಜಿಸತಕ್ಕದ್ದಲ್ಲ ಎಂಬ ಷರತ್ತನ್ನೂ ಸಹ ವಿಧಿಸಿದ್ದಿತು. ಕಾಮಗಾರಿಯನ್ನು ಎರಡು ಪ್ಯಾಕೇಜುಗಳನ್ನಾಗಿ ವಿಭಜಿಸಿ ಪ್ರತಿಯೊಂದೂ ರೂಪಾಯಿ ಎರಡು ಕೋಟಿಗೂ ಕಡಿಮೆ ಇರುವಂತೆ ನೋಡಿಕೊಂಡು ಕರ್ನಾಟಕ ಸರ್ಕಾರದ ನಿರ್ದಿಷ್ಟ ನಿರ್ದೇಶನಗಳನ್ನು ನೇರವಾಗಿ ಉಲ್ಲಂಘಿಸಿ ವಹಿಸಿಕೊಡಲಾಗಿದ್ದಿತು. ₹6.50 ಕೋಟಿ ಅಂದಾಜು ವೆಚ್ಚಕ್ಕೆ ಪ್ರತಿಯಾಗಿ ಕೆಆರ್‌ಐಡಿಎಲ್‌ಗೆ ಕೇವಲ ₹2.71 ಕೋಟಿಯಷ್ಟರ ಮಟ್ಟಿಗೆ ವಹಿಸಿಕೊಡಲಾಗಿದ್ದಿತು.

iii. **ಕೆಆರ್‌ಐಡಿಎಲ್ ಪರವಾಗಿ ಅನುಕೂಲ ಕಲ್ಪಿಸುವ ಸಲುವಾಗಿಯೇ/ಸಹಾಯ ಮಾಡುವ ಸಲುವಾಗಿ ಪರಸ್ಪರ ತಿಳುವಳಿಕೆ ಪತ್ರದಲ್ಲಿ ಪಾವತಿ ಷರತ್ತುಗಳನ್ನು ಮಾಡಿದ್ದುದು:** ಪರಸ್ಪರ ತಿಳಿವಳಿಕೆ ಪತ್ರದ ಕಂಡಿಕೆ 8ರ ಅನುಸಾರ ಪರಸ್ಪರ ತಿಳಿವಳಿಕೆ ಪತ್ರಕ್ಕೆ ಸಹಿ ಹಾಕಿದನಂತರ ಶೇಕಡಾ 50ರಷ್ಟು ಮೊತ್ತವನ್ನು ಬಡ್ಡಿರಹಿತ ಮುಂಗಡವನ್ನಾಗಿ ಪಾವತಿಸಬೇಕಿದ್ದಿತು, ಕಾಮಗಾರಿಯು ಶೇಕಡ 40ರಷ್ಟು ಪೂರ್ಣಗೊಂಡನಂತರ ಶೇಕಡಾ 25ರಷ್ಟನ್ನು ಪಾವತಿಸಬೇಕಿದ್ದಿತು ಹಾಗೂ ಕಾಮಗಾರಿಯು ಶೇಕಡಾ 60ರಷ್ಟು ಪೂರ್ಣಗೊಂಡನಂತರ ಮತ್ತೊಂದು ಶೇಕಡಾ 20ರಷ್ಟನ್ನು ಹಾಗೂ ಉಳಿಕೆ ಶೇಕಡಾ 5ರಷ್ಟನ್ನು ಕಾಮಗಾರಿಯು

ಪೂರ್ಣಗೊಂಡನಂತರ ಮತ್ತು ಮೂರನೇ ತಂಡದಿಂದ ಗುಣಮಟ್ಟ ಪರೀಕ್ಷಣೆಯು ನಡೆದನಂತರ ಪಾವತಿಸಬೇಕಿದ್ದಿತು. ಮೊದಲ ಪ್ಯಾಕೇಜಿನ ಒಟ್ಟಾರೆ ಮೌಲ್ಯ ₹1.99 ಕೋಟಿಗೆ ಪ್ರತಿಯಾಗಿ ಕೆಆರ್ಐಡಿಎಲ್ ಕೇವಲ ₹1.45 ಕೋಟಿ ಮೊತ್ತದ ಅಂದರೆ ಒಟ್ಟಾರೆ ಕಾಮಗಾರಿಯ ಶೇಕಡಾ 72.86ರಷ್ಟು ಕಾಮಗಾರಿಯನ್ನು ಪೂರ್ಣಗೊಳಿಸಿದ್ದಿತು ಎಂಬುದಾಗಿ ವರದಿಯಾಗಿದ್ದಿತು. ಇದಕ್ಕೆ ಪ್ರತಿಯಾಗಿ, ಕಂಪನಿಯು ₹1.90 ಕೋಟಿ[77] ಮೊತ್ತವನ್ನು ಪಾವತಿಸಿದ್ದಿತು. ಮುಂದುವರೆದು, ಕಂಪನಿಯು ಎರಡನೇ ಪ್ಯಾಕೇಜ್‌ನ ಪರಸ್ಪರ ತಿಳಿವಳಿಕೆ ಪತ್ರವನ್ನು ಸಹಿ ಮಾಡಿದನಂತರ ₹35.60 ಲಕ್ಷ ಮೊತ್ತವನ್ನು ಪಾವತಿಸಿದ್ದಿತು (ಜುಲೈ 2020). ಆದಾಗ್ಯೂ, ಕೆಆರ್ಐಡಿಎಲ್ ಮಾರ್ಚ್ 2022ರಲ್ಲಿದ್ದಂತೆ ಕೇವಲ ₹27.00 ಲಕ್ಷ ಮೊತ್ತದಷ್ಟು ಕಾಮಗಾರಿಯನ್ನು ಮಾತ್ರ ಪೂರ್ಣಗೊಳಿಸಿದ್ದಿತು. ಈ ರೀತಿಯಾಗಿ ಕಂಪನಿಯು ಪೂರ್ಣಗೊಂಡಿದ್ದಂತಹ ₹1.72 ಕೋಟಿ ಮೊತ್ತದಷ್ಟು ಕಾಮಗಾರಿಗೆ ಪ್ರತಿಯಾಗಿ ₹2.25 ಕೋಟಿ ಮೊತ್ತವನ್ನು ಪಾವತಿಸಿದ್ದಿತು.

iv. **ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿನ ವಿಳಂಬದ ಕಾರಣ ₹12.78 ಕೋಟಿ ಮೊತ್ತದಷ್ಟು ತಪ್ಪಿಸಬಹುದಾಗಿದ್ದ ಬಾಡಿಗೆ ಪಾವತಿ ಮಾಡಿದ್ದುದು:** ನವೀಕರಣಕ್ಕೆ ಅನುಕೂಲ ಕಲ್ಪಿಸುವ ಸಲುವಾಗಿ ಸಾಂಸ್ಥಿಕ ಕಚೇರಿಯನ್ನು ಒಂದು ಬಾಡಿಗೆ ಕಚೇರಿಗೆ ಸ್ಥಳಾಂತರಿಸಲಾಯಿತು ಹಾಗೂ ಕಾವೇರಿ ಪ್ರದರ್ಶನ ಮಳಿಗೆಯು ತನ್ನ ಕಟ್ಟಡಕ್ಕಾಗಿ ಈಗಾಗಲೇ ಬಾಡಿಗೆಯನ್ನು ಪಾವತಿಸುತ್ತಿದ್ದಿತು. ಕಾಮಗಾರಿಯ ನಿಗದಿತ ವೇಳಾಪಟ್ಟಿಯ ಅನುಸಾರ ಕಾಮಗಾರಿಯ ಮೊದಲ ಪ್ಯಾಕೇಜು ಜುಲೈ 2018ರ ವೇಳೆಗೆ, ಎರಡನೆಯ ಪ್ಯಾಕೇಜು ಜನವರಿ 2019ರ ವೇಳೆಗೆ (ನಂತರದ ಆರು ತಿಂಗಳುಗಳು) ಪೂರ್ಣಗೊಳ್ಳಬೇಕಿದ್ದಿತು. ಮುಂದುವರೆದು, ಕಟ್ಟಡವನ್ನು ಉಪಯೋಗಿಸಿಕೊಳ್ಳುವಂತೆ ಮಾಡಲು ಕೊಳಾಯಿ, ಶೌಚಾಲಯ, ಮುಂತಾದವು, ವಿದ್ಯುಚ್ಛಕ್ತಿ ಮತ್ತು ಆಂತರಿಕ ಅಲಂಕರಣ ಕಾಮಗಾರಿಗಳಿಗೆ ಮೂರು ತಿಂಗಳುಗಳು, ಅಂದರೆ ಏಪ್ರಿಲ್ 2019ರವರೆವಿಗೆ ಕಾಲಾವಧಿಯು ಬೇಕಿದ್ದಿತು. ಆದಾಗ್ಯೂ, ಎರಡೂ ಪ್ಯಾಕೇಜುಗಳನ್ನು ಸಮಯೋಚಿತವಾಗಿ ಪೂರ್ಣಗೊಳಿಸಲಾಗಿರಲಿಲ್ಲ ಹಾಗೂ ಮೇ 2019ರಿಂದ ಮಾರ್ಚ್ 2023ರ ಅವಧಿಗೆ ಬಾಡಿಗೆ ₹12.78 ಕೋಟಿ ಮೊತ್ತವನ್ನು ಪಾವತಿಸಲಾಗಿದ್ದಿತು ***(ವಿವರಗಳು ಅನುಬಂಧ– 34ರಲ್ಲಿ)***

ಈ ರೀತಿಯಾಗಿ, ಕಟ್ಟಡ ನಿರ್ಮಾಣ ನಿಗದಿತ ವೇಳಾಪಟ್ಟಿಯ ಅನುಸಾರ ಏಪ್ರಿಲ್ 2019ರ ವೇಳೆಗೆ ಪೂರ್ಣಗೊಳಿಸಬೇಕಿದ್ದಿತಾದರೂ ಅದನ್ನು ಇನ್ನೂ ಪೂರ್ಣಗೊಳಿಸಲಾಗಿರಲಿಲ್ಲ (ಮೇ 2023). ಕಟ್ಟಡದ ನವೀಕರಣದ ವಿವಿಧ ಹಂತಗಳಲ್ಲಿನ ವಿಳಂಬವು ಬಾಡಿಗೆ ಪಾವತಿಯ ಮೇಲೆ ₹12.78 ಕೋಟಿ ಮೊತ್ತದಷ್ಟು ತಪ್ಪಿಸಬಹುದಾಗಿದ್ದ ವೆಚ್ಚದಲ್ಲಿ ಪರಿಣಮಿಸಿದ್ದಿತು, ಅಲ್ಲದೆಯೇ ಕಟ್ಟಡ ನಿರ್ಮಾಣದಲ್ಲಿ ಮಿತಿಮೀರಿದ ಕಾಲ ಮತ್ತು ವೆಚ್ಚವಾಗುವಲ್ಲಿಯೂ ಪರಿಣಮಿಸಿದ್ದಿತು.

ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದುಕೊಳ್ಳುವಲ್ಲಿನ ವಿಳಂಬವನ್ನು ಒಪ್ಪಿಕೊಂಡು ಕಂಪನಿಯು ನೀಡಿದ್ದಂತಹ ಉತ್ತರವನ್ನು ಸರ್ಕಾರವು ಕಳುಹಿಸಿಕೊಟ್ಟಿದ್ದಿತು (ಮೇ 2023). ಮುಂದುವರೆದು, ಕಂಪನಿಯ ನಿರ್ದೇಶಕರುಗಳ ಮಂಡಳಿಯು ಕಾಮಗಾರಿಯನ್ನು ₹2.00 ಕೋಟಿ ಮೊತ್ತಕ್ಕಿಂತ ಕಡಿಮೆ ಇರುವಂತೆ ಪ್ಯಾಕೇಜುಗಳನ್ನಾಗಿ ವಿಭಜಿಸುವ ನಿರ್ಣಯವನ್ನು ಕೈಗೊಂಡಿತು ಎಂಬುದಾಗಿಯೂ ಉತ್ತರವು ತಿಳಿಸಿದ್ದಿತು. ಕರ್ನಾಟಕ ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು

[77] ಶೇಕಡಾ 50ರಷ್ಟು 1ನೇ ಹಂತದ ಪಾವತಿ ` 99.80 ಲಕ್ಷ ಮೊತ್ತವನ್ನು ಸೆಪ್ಟಂಬರ್ 2017ರಲ್ಲಿ, ಶೇಕಡಾ 25ರಷ್ಟು 2ನೇ ಹಂತದ ಪಾವತಿ ` 49.90 ಲಕ್ಷ ಮೊತ್ತವನ್ನು ಜುಲೈ 2019ರಲ್ಲಿ ಹಾಗೂ ಶೇಕಡ 20ರಷ್ಟು 3ನೇ ಹಂತದ ಪಾವತಿ ` 39.92 ಲಕ್ಷ ಮೊತ್ತವನ್ನು ಮಾರ್ಚ್ 2020ರಲ್ಲಿ ಪಾವತಿಸಲಾಗಿದ್ದಿತು.

ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮದ ಉಲ್ಲಂಘನೆಗೆ ಜವಾಬ್ದಾರರಾಗಿರುವಂತಹ ಅಂದಿನ ನಿರ್ದೇಶಕರುಗಳ ಮಂಡಳಿಯ ಮೇಲೆ ಕ್ರಮಗಳನ್ನು ಕೈಗೊಳ್ಳುವಂತೆ ಕಂಪನಿಯು ಸರ್ಕಾರಕ್ಕೆ ಪತ್ರವನ್ನು ಬರೆದಿರುವುದು. ಕಂಪನಿಯು ತಮ್ಮ ತಪ್ಪನ್ನು ಒಪ್ಪಿಕೊಂಡಿರುವುದಾದರೂ, ಕಟ್ಟಡ ನವೀಕರಣದ ವಿವಿಧ ಹಂತಗಳಲ್ಲಿನ ವಿಳಂಬದ ಕಾರಣ ಕಂಪನಿಯು ಬಾಡಿಗೆ ಪಾವತಿಯ ಮೇಲೆ ₹12.78 ಕೋಟಿ ಮೊತ್ತದಷ್ಟು ತಪ್ಪಿಸಬಹುದಾಗಿದ್ದಂತಹ ವೆಚ್ಚವನ್ನು ಮಾಡುವಲ್ಲಿ ಹಾಗೂ ಕಟ್ಟಡ ನವೀಕರಣದ ಮೇಲೆ ಮಿತಿಮೀರಿದ ಕಾಲ ಮತ್ತು ವೆಚ್ಚವಾಗುವಲ್ಲಿ ಪರಿಣಮಿಸಿದ್ದಿತು ಎಂಬ ವಾಸ್ತವಾಂಶವು ಉಳಿದುಕೊಳ್ಳುತ್ತದೆ.

***ಶಿಫಾರಸು 28:***
**ಕಂಪನಿಯು, ನವೀಕರಣ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವ ಸಲುವಾಗಿ ಸಕ್ರಿಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಹಾಗೂ ಕಟ್ಟಡವನ್ನು ಆದಷ್ಟು ಬೇಗನೆ ಸ್ವಾಧೀನಪಡಿಸಿಕೊಳ್ಳತಕ್ಕದ್ದು ಎಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತಿರುವುದು.**

**ಕರ್ನಾಟಕ ಸಾಬೂನುಗಳು ಮತ್ತು ಮಾರ್ಜಕಗಳು ನಿಯಮಿತ (ಕೆಎಸ್‌ಡಿಎಲ್)**

### *3.3* ತಪ್ಪಿಸಬಹುದಾಗಿದ್ದಂತಹ ವೆಚ್ಚ

**ಕಂಪನಿಯ ನಿರ್ದೇಶಕರುಗಳ ಮಂಡಳಿಯು ಮೈಸೂರು ಗಂಧದ ಸಾಬೂನು ಸುಗಂಧದ ಉತ್ಪಾದನೆಯಲ್ಲಿ ಲಾವಂಚ ಬೇರಿನ (ಕಸ್ಕಸ್/ವೆಟಿವರ್) ತೈಲದ ಉಪಯೋಗವನ್ನು ನಿಲ್ಲಿಸುವ ನಿರ್ಣಯವನ್ನು ಕೈಗೊಂಡಿತು (ಡಿಸೆಂಬರ್ 2020). ಆದಾಗ್ಯೂ, ಫೆಬ್ರವರಿ 2021ರಲ್ಲಿ 1,893 ಕಿಲೋಗ್ರಾಂಗಳಷ್ಟು ಲಾವಂಚ ಬೇರಿನ (ಕಸ್ಕಸ್/ವೆಟಿವರ್) ತೈಲವನ್ನು ಖರೀದಿಸಲಾಗಿದ್ದಿತು, ಇದು ₹4.87 ಕೋಟಿ ಮೊತ್ತದಷ್ಟು ತಪ್ಪಿಸಬಹುದಾಗಿದ್ದಂತಹ ವೆಚ್ಚದಲ್ಲಿ ಪರಿಣಮಿಸಿದ್ದಿತು.**

ಕರ್ನಾಟಕ ಸಾಬೂನುಗಳು ಮತ್ತು ಮಾರ್ಜಕಗಳ ನಿಯಮಿತವು (ಕಂಪನಿ) ಇನ್ನಿತರವುಗಳ ಜೊತೆಗೆ ಮೈಸೂರು ಗಂಧದ ಸಾಬೂನು (ಎಂಎಸ್‌ಎಸ್) ಬ್ರ್ಯಾಂಡ್ ಹೆಸರಿನಲ್ಲಿ ಸೋಪುಗಳ ತಯಾರಿಕೆಯಲ್ಲಿ ತೊಡಗಿಸಿಕೊಂಡಿರುವುದು. ಮೈಸೂರು ಗಂಧದ ಸಾಬೂನು ಸುಗಂಧ/ಪರಿಮಳದ ಐಟಂಗಳಲ್ಲಿ ಲಾವಂಚ ಬೇರಿನ (ಕಸ್ಕಸ್/ವೆಟಿವರ್) ತೈಲವೂ ಒಂದಾಗಿರುತ್ತದೆ, ಇದನ್ನು ಮೈಸೂರು ಗಂಧದ ಸಾಬೂನಿನ ಸುಗಂಧ/ಪರಿಮಳದಲ್ಲಿ ದಾರುವಿನಂತ ಮತ್ತು ನಯವಿಲ್ಲದ ಖ್ಯಾತಿಯನ್ನು ವರ್ಧಿಸುವ/ಹೆಚ್ಚಳಗೊಳಿಸುವ ಸಲುವಾಗಿ 2017–18ರಲ್ಲಿ ಪರಿಚಯಿಸಲಾಗಿದ್ದಿತು.

ಕಂಪನಿಯು 6,643 ಕಿಗ್ರಾಂಗಳಷ್ಟು ಲಾವಂಚ ಬೇರಿನ (ಕಸ್ಕಸ್/ವೆಟಿವರ್) ತೈಲದ ಖರೀದಿಗಾಗಿ ಕಂಪನಿಯ ಉತ್ಪಾದನಾ ವೇಳಾಪಟ್ಟಿಯ ಅನುಸಾರ ಮಾರ್ಚ್ 2020ರಿಂದ ಮಾರ್ಚ್ 2021ರ ಅವಧಿಯಲ್ಲಿ ವಿತರಣೆ ನೀಡುವ ನಿರ್ದಿಷ್ಟ ಷರತ್ತಿನೊಂದಿಗೆ ಇ–ಟೆಂಡರುಗಳನ್ನು ಆಹ್ವಾನಿಸಿತು (ಜನವರಿ 2020). ಮೆ. ಬನ್ನಾರಿ ಕನ್ಸ್‌ಟ್ರಕ್ಷನ್ಸ್, ಮೈಸೂರು (ಸರಬರಾಜುದಾರರು), ಇವರು ಕನಿಷ್ಠ ದರವನ್ನು ಘೋಷಿಸಿದ್ದಂತಹ ಸವಾಲುದಾರರಾದರು ಎಂಬುದಾಗಿ ಕಂಡುಬಂದರು (ಜೂನ್ 2020) ಹಾಗೂ ಅದರಂತೆಯೇ ಖರೀದಿ ಆದೇಶವನ್ನು ಕಿಗ್ರಾಂ ಒಂದಕ್ಕೆ ₹25,700/–ರಂತೆ ಹಾಗೂ ಇದಕ್ಕೆ ಶೇಕಡಾ 18ರಂತೆ ಜಿಎಸ್‌ಟಿ ಸೇರಿಸುವ ಮೂಲಕ ನೀಡಲಾಯಿತು (29 ಜುಲೈ 2020).[78] ವಿತರಣಾ ವೇಳಾಪಟ್ಟಿಯ ಅನುಸಾರ 1,250 ಕಿಗ್ರಾಂಗಳನ್ನು ಆಗಸ್ಟ್ 2020ರ ವೇಳೆಗೆ ವಿತರಿಸಬೇಕಿದ್ದಿತು ಮತ್ತು ಉಳಿಕೆ ಪರಿಮಾಣವನ್ನು ಉತ್ಪಾದನಾ ಕಾರ್ಯಕ್ರಮದ ಅನುಸಾರ ತದನಂತರದಲ್ಲಿ ತಿಳಿಸಬೇಕಿದ್ದಿತು.

[78] ಮಾರ್ಚ್ 2020ರಿಂದ ಜುಲೈ 2020ರ ಅವಧಿಯಲ್ಲಿ ಲಾವಂಚ ಬೇರಿನ (ಕಸ್ಕಸ್/ವೆಟಿವರ್) ತೈಲವನ್ನು ಮೆ. ಕರ್ನಾಟಕ ಅರೋಮಾಸ್ (ಹಿಂದಿನ ಸರಬರಾಜುದಾರರು) ಇವರಿಂದ ಕಿಗ್ರಾಂ ಒಂದಕ್ಕೆ ₹ 26,000/– ಹಾಗೂ ಇದಕ್ಕೆ ಶೇಕಡಾ 18ರಷ್ಟು ಜಿಎಸ್‌ಟಿ ಸೇರಿಸಿದಂತೆ ಖರೀದಿಸಲಾಗಿದ್ದಿತು.

ಮೈಸೂರು ಗಂಧದ ಸೋಪು ಸುಗಂಧ/ಪರಿಮಳದ ಉತ್ಪಾದನಾ ವೆಚ್ಚವನ್ನು ಕನಿಷ್ಠಮಟ್ಟಕ್ಕೆ ತರುವ ಉದ್ದೇಶದಿಂದ, ಕಂಪನಿಯು ತನ್ನ ನಿರ್ದೇಶಕರುಗಳ ಮಂಡಳಿಯ ಸಭೆಯಲ್ಲಿ ಮೈಸೂರು ಗಂಧದ ಸೋಪು ಉತ್ಪನ್ನಗಳಲ್ಲಿ ಲಾವಂಚ ಬೇರಿನ (ಕಸ್ಕಸ್/ವೆಟಿವರ್) ತೈಲದೊಂದಿಗೆ ಅಥವಾ ಅದರ ಹೊರತಾಗಿ ಸುಗಂಧ/ಪರಿಮಳದಲ್ಲಿ ಹೆಚ್ಚಿನ ವ್ಯತ್ಯಾಸ ಕಂಡುಬರುತ್ತಿರಲಿಲ್ಲವಾದ್ದರಿಂದ ಲಾವಂಚ ಬೇರಿನ (ಕಸ್ಕಸ್/ವೆಟಿವರ್) ತೈಲದ ಹೊರತಾಗಿ ಮೈಸೂರು ಗಂಧದ ಸೋಪು ಸುಗಂಧ/ಪರಿಮಳದ ಉತ್ಪಾದನೆಯನ್ನು ಪ್ರಾರಂಭಿಸುವ ತೀರ್ಮಾನವನ್ನು ತೆಗೆದುಕೊಂಡಿತು (ಡಿಸೆಂಬರ್ 2020). ಕಂಪನಿಯ ಸಂಶೋಧನಾ ತಂಡವೂ ಸಹ ಈ ವಿಷಯದ ಬಗ್ಗೆ ಅನುಮೋದಕ ಅಭಿಪ್ರಾಯವನ್ನು ನೀಡಿದ್ದಿತು (ಡಿಸೆಂಬರ್ 2020). ಈ ನಿಟ್ಟಿನಲ್ಲಿ ತಕ್ಕುದಾದ ರೀತಿಯಲ್ಲಿ ನಡೆದಂತಹ ಚರ್ಚೆಯನಂತರ, 2021–22ರಿಂದ ಲಾವಂಚ ಬೇರಿನ (ಕಸ್ಕಸ್/ವೆಟಿವರ್) ತೈಲದ ಹೊರತಾಗಿ ಮೈಸೂರು ಗಂಧದ ಸೋಪು ಸುಗಂಧ/ಪರಿಮಳದ ಉತ್ಪಾದನೆಯನ್ನು ಪ್ರಾರಂಭಿಸುವ ಸಲುವಾಗಿ ನಿರ್ದೇಶಕರುಗಳ ಮಂಡಳಿಯು ತನ್ನ ಅನುಮೋದನೆ ನೀಡಿತು.

ಲಾವಂಚ ಬೇರಿನ (ಕಸ್ಕಸ್/ವೆಟಿವರ್) ತೈಲದ ಹೊರತಾಗಿ ಮೈಸೂರು ಗಂಧದ ಸೋಪು ಸುಗಂಧ/ಪರಿಮಳದ ಉತ್ಪಾದನೆಯನ್ನು ಪ್ರಾರಂಭಿಸುವ ಸಲುವಾಗಿ ನಿರ್ದೇಶಕರುಗಳ ಮಂಡಳಿಯು ತನ್ನ ನಿರ್ಣಯವನ್ನು ತೆಗೆದುಕೊಳ್ಳುವ ವೇಳೆಗಾಗಲೇ (ಡಿಸೆಂಬರ್ 2020), ಕಂಪನಿಯು ಸರಬರಾಜುದಾರರದಿಂದ ಜಿಎಸ್‌ಟಿ ಹೊರತುಪಡಿಸಿದಂತೆ ₹12.21 ಕೋಟಿ ಮೊತ್ತದಷ್ಟು ಒಟ್ಟಾರೆ ವೆಚ್ಚದಲ್ಲಿ 4,750 ಕಿಗ್ರಾಂಗಳಷ್ಟು (ಟೆಂಡರಿಗೆ ಇಡಲಾಗಿದ್ದಂತಹ 6,643 ಕಿಗ್ರಾಂಗಳ ಪೈಕಿ) ಲಾವಂಚ ಬೇರಿನ (ಕಸ್ಕಸ್/ವೆಟಿವರ್) ತೈಲವನ್ನು ಖರೀದಿಸಿದ್ದಿತು. ಮುಂದುವರೆದು ಕಂಪನಿಯು ಡಿಸೆಂಬರ್ 2020ರ ಅಂತ್ಯದಲ್ಲಿದಂತೆ ಲಾವಂಚ ಬೇರಿನ (ಕಸ್ಕಸ್/ವೆಟಿವರ್) ತೈಲದ 1,737.52 ಕಿಗ್ರಾಂ ಕ್ರೋಡೀಕೃತ ದಾಸ್ತಾನನ್ನು ಹೊಂದಿದ್ದಿತು. ಆದಾಗ್ಯೂ, ಕಂಪನಿಯು ಟೆಂಡರಿಗೆ ಇಡಲಾಗಿದ್ದಂತಹ ಸಂಪೂರ್ಣ ಬಾಕಿ ಪರಿಮಾಣವನ್ನು (ಅಂದರೆ 1,893 ಕಿಗ್ರಾಂಗಳು) ವಿತರಿಸುವಂತೆ ಸರಬರಾಜುದಾರರಿಗೆ ತನ್ನ ನಿರ್ದೇಶನವನ್ನು ನೀಡಿದ್ದಿತು (5 ಫೆಬ್ರವರಿ 2021) ಹಾಗೂ ಅದನ್ನು ಅದೇ ದಿನ ಸರಬರಾಜು ಮಾಡಲಾಯಿತು.

ಈ ರೀತಿಯಾಗಿ ಜುಲೈ 2020ರಿಂದ ಫೆಬ್ರವರಿ 2021ರ ಅವಧಿಯಲ್ಲಿ 6,643 ಕಿಗ್ರಾಂಗಳಷ್ಟು ಲಾವಂಚ ಬೇರಿನ (ಕಸ್ಕಸ್/ವೆಟಿವರ್) ತೈಲವನ್ನು ಸರಬರಾಜು ಮಾಡಲಾಗಿದ್ದಿತು ಹಾಗೂ ಅದಕ್ಕಾಗಿ ಸರಬರಾಜುದಾರರಿಗೆ ₹ 20.16 ಕೋಟಿ ಮೊತ್ತವನ್ನು ಪಾವತಿಸಲಾಗಿದ್ದಿತು (ಸೆಪ್ಟೆಂಬರ್ 2020ರಿಂದ ಮಾರ್ಚ್ 2021). ಲಾವಂಚ ಬೇರಿನ (ಕಸ್ಕಸ್/ವೆಟಿವರ್) ತೈಲದ ದಾಸ್ತಾನನ್ನು ಮೈಸೂರು ಗಂಧದ ಸಾಬೂನು ಸುಗಂಧ/ಪರಿಮಳ ಉತ್ಪಾದನೆಯಲ್ಲಿ ಜೂನ್ 2021ರವರೆವಿಗೂ ಉಪಯೋಗಿಸಲಾಗಿದ್ದಿತು.

ಗುತ್ತಿಗೆಯ ಸಾಮಾನ್ಯ ಷರತ್ತುಗಳ (ಜಿಸಿಸಿ) ಭಾಗ–IIIರ ಕಂಡಿಕೆ 17ರ ಅನುಸಾರ, ಖರೀದಿದಾದರು ಯಾವುದೇ ಸಮಯದಲ್ಲಿಯೂ ಸರಬರಾಜುದಾರರಿಗೆ ಲಿಖಿತ ಆದೇಶವನ್ನು ನೀಡುವ ಮೂಲಕ ಸರಬರಾಜು ಮಾಡಬೇಕಾದ ಪರಿಮಾಣವನ್ನೂ ಒಳಗೊಂಡಂತೆ ಗುತ್ತಿಗೆಯ ಸಾಮಾನ್ಯ ವ್ಯಾಪ್ತಿಯಲ್ಲಿ ಬದಲಾವಣೆಗಳನ್ನು/ಮಾರ್ಪಾಡುಗಳನ್ನು ಮಾಡಬಹುದು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ಕಂಪನಿಯು ಲಾವಂಚ ಬೇರಿನ (ಕಸ್ಕಸ್/ವೆಟಿವರ್) ತೈಲದ ಉಪಯೋಗವನ್ನು ಸ್ಥಗಿತಗೊಳಿಸುವ ಸಲುವಾಗಿ ನಿರ್ದೇಶಕರುಗಳ ಮಂಡಳಿಯು ತನ್ನ ನಿರ್ಣಯವನ್ನು ಕೈಗೊಂಡನಂತರವೂ ಸಮರ್ಪಕ ಪರಿಮಾಣದ ದಾಸ್ತಾನನ್ನು ಹೊಂದಿದ್ದ ಹೊರತಾಗಿಯೂ, ಸಂಪೂರ್ಣ ಬಾಕಿ ಪರಿಮಾಣವನ್ನು ಸರಬರಾಜು ಮಾಡುವಂತೆ ಸರಬರಾಜುದಾರರಿಗೆ ನಿರ್ದೇಶನಗಳನ್ನು ನೀಡಿದ್ದಿತು. ಈ ರೀತಿಯಾಗಿ ಖರೀದಿಸಬೇಕಾದ ಪರಿಮಾಣವನ್ನು ತಗ್ಗಿಸುವ ಸಲುವಾಗಿನ ಗುತ್ತಿಗೆಯ ಷರತ್ತನ್ನು ಅನ್ವಯಗೊಳಿಸುವಲ್ಲಿ ವ್ಯವಸ್ಥಾಪನೆಯ ವಿಫಲತೆಯು ₹4.87 ಕೋಟಿ ಮೊತ್ತದಷ್ಟು ತಪ್ಪಿಸಬಹುದಾಗಿದ್ದಂತಹ ವೆಚ್ಚವನ್ನು ಭರಿಸುವಲ್ಲಿ ಪರಿಣಮಿಸಿದ್ದಿತು.

ಒಂದು ಗುತ್ತಿಗೆ ಬದ್ಧತೆಯನ್ನು ಪೂರೈಸುವ ಸಲುವಾಗಿ 1,893 ಕಿಗ್ರಾಂಗಳಷ್ಟು ಲಾವಂಚ ಬೇರಿನ (ಕಸ್ಕಸ್/ವೆಟಿವರ್) ತೈಲವನ್ನು ಖರೀದಿಸಲಾಗಿದ್ದಿತು ಎಂಬುದಾಗಿ ಸರ್ಕಾರವು ತಿಳಿಸಿತು (ಜನವರಿ 2023). ಸಂಯೋಜನೆಯಲ್ಲಿನ ಮಾರ್ಪಾಡುಗಳು ಸಮಯದ ಅಗತ್ಯತೆಯನ್ನು ಹೊಂದಿರುತ್ತವೆಯಾದ್ದರಿಂದ ಹಾಗೂ ಸಂಯೋಜನೆಯಲ್ಲಿನ ತತ್ಕ್ಷಣದ ಮಾರ್ಪಾಡುಗಳು ಬಹಳಷ್ಟು ಪ್ರಮಾಣದಲ್ಲಿನ ನಷ್ಟದಲ್ಲಿ ಪರಿಣಮಿಸುತ್ತಿದ್ದಿತಾದ್ದರಿಂದ, ಖರೀದಿಯನ್ನು ಸಮರ್ಥಿಸಿಕೊಳ್ಳಬಹುದು. ಮೇಲೆ ತಿಳಿಸಲಾದಂತಹ ಷರತ್ತಿನ ಅನುಸಾರ ಗುತ್ತಿಗೆಯನ್ನು ಅಂತ್ಯಗೊಳಿಸುವ ಸಲುವಾಗಿ ಕಂಪನಿಗೆ ಒಂದು ಆಯ್ಕೆ ಇದ್ದಿತಾದ್ದರಿಂದ ಉತ್ತರವು ಒಪ್ಪುವಂತಿರುವುದಿಲ್ಲ. ಕಂಪನಿಯು ಡಿಸೆಂಬರ್ 2020ರಲ್ಲಿದ್ದಂತೆ ಸಮರ್ಪಕವಾದಂತಹ ಪರಿಮಾಣದ ದಾಸ್ತಾನನ್ನು ಹೊಂದಿದ್ದಿತು. ಮುಂದುವರೆದು, ಲಾವಂಚ ಬೇರಿನ (ಕಸ್ಕಸ್/ವೆಟಿವರ್) ತೈಲದ ಉಪಯೋಗವನ್ನು ಸ್ಥಗಿತಗೊಳಿಸುವ ಬಗ್ಗೆ ಕಂಪನಿಯ ತೀರ್ಮಾನವನ್ನು ಡಿಸೆಂಬರ್ 2020ರಲ್ಲಿ ತೆಗೆದುಕೊಳ್ಳಲಾಗಿದ್ದಿತು ಹಾಗೂ ಅದನ್ನು 2021–22ರಲ್ಲಿ ಕಾರ್ಯಗತಗೊಳಿಸಬೇಕಿದ್ದಿತು, ಅಂದರೆ ಅದು ಕಂಪನಿಯು ಮಾರ್ಪಾಡು/ಬದಲಾವಣೆಗಳನ್ನು ಯೋಜಿಸುವ ಸಲುವಾಗಿ ಕಂಪನಿಗೆ ಸಾಕಷ್ಟು ಕಾಲಾವಕಾಶವಿದ್ದಿತು ಎಂಬುದಾಗಿ ಅರ್ಥೈಸುತ್ತದೆ.

ಈ ರೀತಿಯಾಗಿ, ಲಾವಂಚ ಬೇರಿನ (ಕಸ್ಕಸ್/ವೆಟಿವರ್) ತೈಲದ ಅನಗತ್ಯ ಖರೀದಿಯು ₹4.87 ಕೋಟಿ ಮೊತ್ತದ ತಪ್ಪಿಸಬಹುದಾಗಿದ್ದಂತಹ ವೆಚ್ಚವನ್ನು ಭರಿಸುವಲ್ಲಿ ಪರಿಣಮಿಸಿದ್ದಿತು.

***ಶಿಫಾರಸು 29:***

**ಕಂಪನಿಯ ಹಣಕಾಸಿನ ಹಿತಾಸಕ್ತಿಯನ್ನು ಸಂರಕ್ಷಿಸಿಗೊಳ್ಳುವ ಒಪ್ಪಂದದ ನಿಬಂಧನೆಗಳನ್ನು ಜಾರಿಗೊಳಿಸುವ ವಿದಾನವನ್ನು ಖಚಿತಪಡಿಸಕೊಳ್ಳಬೇಕು ಹಾಗು ಉತ್ಪಾನಾ ಯೋಜನೆ ಮತ್ತು ಸಂಗ್ರಹಣೆಯನ್ನು ಆದರಿಸಿ ಖರೀದಿಯನ್ನು ಮಾಡತಕ್ಕದ್ದು.**

## ಸಾರ್ವಜನಿಕ ವಲಯ ಉದ್ದಿಮೆಗಳಿಂದ ಲೆಕ್ಕಪತ್ರಗಳ ಸಲ್ಲಿಕೆ

### ಲೆಕ್ಕಪತ್ರಗಳನ್ನು ಸಮಯೋಚಿತವಾಗಿ ಅಂತಿಮರೂಪಕ್ಕೆ ತರುವ ಮತ್ತು ಸಲ್ಲಿಸುವ ಅಗತ್ಯತೆ

**3.4**. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದಗಳು 394 ಮತ್ತು 395ರ ಅನುಸಾರ, ಒಂದು ಸರ್ಕಾರಿ ಕಂಪನಿಯ ಕಾರ್ಯನಿರ್ವಹಣೆ ಮತ್ತು ಅದರ ವ್ಯಾಪಾರವ್ಯವಹಾರಗಳ ಮೇಲಿನ ವಾರ್ಷಿಕ ವರದಿಯನ್ನು ತನ್ನ ವಾರ್ಷಿಕ ಸಾಮಾನ್ಯ ಸಭೆಯು (ಎಜಿಎಂ) ನಡೆದ ದಿನಾಂಕದಿಂದ ಮೂರು ತಿಂಗಳುಗಳ ಒಳಗೆ ತಯಾರಿಸತಕ್ಕದ್ದು ಹಾಗೂ ಆ ರೀತಿ ತಯಾರಿಸಿದ ನಂತರ ಸಾಧ್ಯವಾದಷ್ಟು ತ್ವರಿತವಾಗಿ ರಾಜ್ಯ ಶಾಸಕಾಂಗದ ಸದನದ ಮುಂದೆ ಅಥವಾ ಎರಡೂ ಸದನಗಳ ಮುಂದೆ ಲೆಕ್ಕಪರಿಶೋಧನಾ ವರದಿಯ ಒಂದು ಪ್ರತಿಯೊಂದಿಗೆ ಹಾಗೂ ಅಂತಹ ಲೆಕ್ಕಪರಿಶೋಧನಾ ವರದಿಗೆ ಪೂರಕವಾಗಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಯಾವುದಾದರೂ ಟೀಕೆಟಿಪ್ಪಣಿಗಳನ್ನು ಮಾಡಿದ್ದಲ್ಲಿ, ಅಂತಹವುಗಳೊಂದಿಗೆ ಮಂಡಿಸತಕ್ಕದ್ದು. ಶಾಸನಬದ್ಧ ನಿಗಮಗಳನ್ನು ನಿಯಂತ್ರಿಸುವಂತಹ ಸಂಬಂಧಿತ ಅಧಿನಿಯಮಗಳಲ್ಲಿಯೂ ಅಂತಹುದೇ ಅನುವುಗಳು ಇರುವವು. ಈ ವ್ಯವಸ್ಥೆಯು ರಾಜ್ಯದ ಸಂಚಿತ ನಿಧಿಯಿಂದ ಕಂಪನಿಗಳಲ್ಲಿ ಹೂಡಿಕೆ ಮಾಡಲಾಗಿರುವಂತಹ ಸಾರ್ವಜನಿಕ ಹಣಕಾಸಿನ ಬಳಕೆಯ ಮೇಲೆ ಅಗತ್ಯ ಶಾಸಕಾಂಗ ನಿಯಂತ್ರಣವನ್ನು ಒದಗಿಸುವುದು.

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 96ರ ಪ್ರಕಾರಪ್ರತಿಯೊಂದು ಕಂಪನಿಯು ಪ್ರತೀ ಕ್ಯಾಲೆಂಡರ್ ಸಾಲಿನಲ್ಲಿಯೂ ತನ್ನ ಷೇರುದಾರರುಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸುವ ಅಗತ್ಯತೆಯನ್ನು ಹೊಂದಿರುವುದು. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 129 ಪ್ರಸಕ್ತ ಹಣಕಾಸು ಸಾಲಿನ ಲೆಕ್ಕಪರಿಶೋಧನೆಗೆ ಒಳಪಟ್ಟಂತಹ ಹಣಕಾಸು ತ:ಖ್ತೆಗಳನ್ನು ಮೇಲೆ

ತಿಳಿಸಲಾದಂತಹ ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸತಕ್ಕದ್ದು ಎಂಬುದಾಗಿ ನಿರ್ದಿಷ್ಟಪಡಿಸಿರುವುದು. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 129ರ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 129ರ ಅನುವುಗಳನ್ನು ಅನುಸರಿಸದಿರುವಲ್ಲಿ ಜವಾಬ್ದಾರಿಯುತವಾಗಿರುವಂತಹ ಕಂಪನಿಯ ನಿರ್ದೇಶಕರುಗಳನ್ನು ಒಳಗೊಂಡಂತೆ ವ್ಯಕ್ತಿಗಳಿಗೆ ದಂಡವನ್ನು ವಿಧಿಸುವುದು ಹಾಗೂ ಜೈಲು ಶಿಕ್ಷೆ ಮುಂತಾದ ದಂಡವನ್ನು ವಿಧಿಸುವ ಸಲುವಾಗಿ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 129(7) ಅನುವು ಮಾಡಿರುವುದು. ಪ್ರತಿಯೊಂದೂ ಹಣಕಾಸು ಸಾಲಿಗೆ ಕಂಪನಿಗಳ ಹಣಕಾಸು ತ:ಖ್ತೆಗಳನ್ನು ಸಂಬಂಧಿತ ಹಣಕಾಸು ಸಾಲು ಮುಕ್ತಾಯಗೊಳ್ಳುವಂತಹ ದಿನಾಂಕದಿಂದ ಆರು ತಿಂಗಳುಗಳ ಒಳಗೆ ಅಂದರೆ ಸೆಪ್ಟಂಬರ್ ತಿಂಗಳ ಅಂತ್ಯದ ಒಳಗೆ[79] ಅಂತಿಮರೂಪಕ್ಕೆ ತರುವ ಅಗತ್ಯತೆಯಿರುತ್ತದೆ.

**ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–*II*), ಇವರ ಕಚೇರಿಯ ಲೆಕ್ಕಪರಿಶೋಧನಾ ವ್ಯಾಪ್ತಿಯ ಅಡಿಯಲ್ಲಿನ ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪತ್ರಗಳ ಸ್ಥಿತಿಗತಿಗಳು**

**3.4.1** 31 ಮಾರ್ಚ್ 2022ರಲ್ಲಿದ್ದಂತೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೇಖಾಪಾಲರ ಲೆಕ್ಕಪರಿಶೋಧನಾ ವ್ಯಾಪ್ತಿಯ ಅಡಿಯಲ್ಲಿ ಆರು ಶಾಸನಬದ್ಧ ನಿಗಮಗಳು ಹಾಗೂ 13 ಕಾರ್ಯಸ್ಥಗಿತ ಸರ್ಕಾರಿ ಕಂಪನಿಗಳನ್ನೂ ಒಳಗೊಂಡಂತೆ 125 ಸಾರ್ವಜನಿಕ ವಲಯ ಉದ್ದಿಮೆಗಳು ಇದ್ದವು ***(ಅನುಬಂಧ–32ನ್ನು ಉಲ್ಲೇಖಿಸಿ)*** ಇವುಗಳ ಪೈಕಿ, 79 ಸಾರ್ವಜನಿಕ ವಲಯ ಉದ್ದಿಮೆಗಳು ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ– *II*), ಇವರ ಕಚೇರಿಯ ಲೆಕ್ಕಪರಿಶೋಧನಾ ವ್ಯಾಪ್ತಿಯ ಅಡಿಯಲ್ಲಿ ಬರುತ್ತವೆ. 31 ಮಾರ್ಚ್ 2022ರಲ್ಲಿದ್ದಂತೆ ಇವುಗಳ ಪೈಕಿ ನಾಲ್ಕು ಶಾಸನಬದ್ಧ ನಿಗಮಗಳನ್ನು ಒಳಗೊಂಡಂತೆ 68 ಸಾರ್ವಜನಿಕ ವಲಯ ಉದ್ದಿಮೆಗಳು ಕಾರ್ಯನಿರತವಾಗಿದ್ದವು ಹಾಗೂ 11 ಕಂಪನಿಗಳು ಕಾರ್ಯಸ್ಥಗಿತಗೊಂಡಿದ್ದವು.

30 ಸೆಪ್ಟಂಬರ್ 2022ರ[80] ವೇಳೆಗೆ ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತರುವಲ್ಲಿ, ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ– *II*), ಇವರ ಕಚೇರಿಯ ಲೆಕ್ಕಪರಿಶೋಧನಾ ವ್ಯಾಪ್ತಿಯ ಅಡಿಯಲ್ಲಿನ ಸಾರ್ವಜನಿಕ ವಲಯ ಉದ್ದಿಮೆಗಳು ಮಾಡಿರುವಂತಹ ಪ್ರಗತಿಯ ವಿವರಗಳನ್ನು ಈ ಕೆಳಗಿನ ಕೋಷ್ಟಕವು ನೀಡುತ್ತದೆ.

**ಕೋಷ್ಟಕ ಸಂಖ್ಯೆ 3.4.1: ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ– *II*), ಇವರ ಕಚೇರಿಯ ಲೆಕ್ಕಪರಿಶೋಧನಾ ವ್ಯಾಪ್ತಿಯ ಅಡಿಯಲ್ಲಿನ ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳು ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತರುವಲ್ಲಿನ ಸ್ಥಿತಿಗತಿಗಳು**

| ಕ್ರಮ ಸಂಖ್ಯೆ | ವಿವರಗಳು | 2019–20 | 2020–21 | 2021–22 |
|---|---|---|---|---|
| 1 | ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | 66 | 67 | 68 |
| 2 | ಪ್ರಸಕ್ತ ಸಾಲಿನಲ್ಲಿ ಅಂತಿಮರೂಪಕ್ಕೆ ತರಲಾದ ಲೆಕ್ಕಪತ್ರಗಳ ಸಂಖ್ಯೆ | 78 | 40 | 56 |
| 3 | ಪ್ರಸಕ್ತ ಸಾಲಿಗೆ ಸಂಬಂಧಿಸಿದಂತೆ ಅಂತಿಮರೂಪಕ್ಕೆ ತರಲಾದ ಲೆಕ್ಕಪತ್ರಗಳ ಸಂಖ್ಯೆ | 51 | 29 | 22 |
| 4 | ಹಿಂದಿನ ಸಾಲುಗಳಿಗೆ ಸಂಬಂಧಿಸಿದಂತೆ ಅಂತಿಮರೂಪಕ್ಕೆ ತರಲಾದ ಲೆಕ್ಕಪತ್ರಗಳ ಸಂಖ್ಯೆ | 27 | 11 | 34 |

[79] ಕಂಪನಿಗಳ ಅಧಿನಿಯಮ, 2013ರ ಅನುಸಾರ 2021–22 ಹಣಕಾಸು ಸಾಲಿಗೆ ಕಂಪನಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು 30 ಸೆಪ್ಟಂಬರ್ 2022ರಂದು ಅಥವಾ ಅದಕ್ಕೆ ಮುಂಚಿತವಾಗಿ ನಡೆಸಬೇಕಿದ್ದಿತು.

[80] 2017–18ರಿಂದ 2018–19 ಹಣಕಾಸು ಸಾಲುಗಳಿಗೆ ಪ್ರಗತಿಯು ಸಂಬಂಧಿತ 30 ಸೆಪ್ಟಂಬರ್‌ರಲ್ಲಿದ್ದಂತೆ ಆಗಿದ್ದಿತು, 2019–20 ಹಣಕಾಸು ಸಾಲಿಗೆ ಅದು 31.12.2020 ಆಗಿದ್ದಿತು ಹಾಗೂ 2020–21 ಹಣಕಾಸು ಸಾಲಿಗೆ ಅದು 30.11.2021 ಆಗಿದ್ದಿತು.

| ಕ್ರಮ ಸಂಖ್ಯೆ | ವಿವರಗಳು | 2019–20 | 2020–21 | 2021–22 |
|---|---|---|---|---|
| 5 | ಬಾಕಿಯಿರುವಂತಹ ಲೆಕ್ಕಪತ್ರಗಳ ಸಂಖ್ಯೆ | 31 | 57 | 68 |
| 6 | ಬಾಕಿಯಿರುವಂತಹ ಲೆಕ್ಕಪತ್ರಗಳೊಂದಿಗಿನ ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | 15 | 37 | 45 |
| 7 | ಬಾಕಿಗಳ ವಿಸ್ತೀರ್ಣ (ವರ್ಷಗಳು ಸಂಖ್ಯೆಯಲ್ಲಿ) | 1ರಿಂದ 6 ವರ್ಷಗಳು | 1ರಿಂದ 7 ವರ್ಷಗಳು | 1ರಿಂದ 7 ವರ್ಷಗಳು |

ಪ್ರಸಕ್ತ ಸಾಲಿನಲ್ಲಿ 51 ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ 56 ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರಲಾಗಿದ್ದಿತು, ಇವುಗಳು ನಾಲ್ಕು ಶಾಸನಬದ್ಧ ನಿಗಮಗಳ ಎರಡು ಲೆಕ್ಕಪತ್ರಗಳನ್ನು ಒಳಗೊಂಡಿದ್ದವು. ಬಾಕಿಯಿರುವಂತಹ ಲೆಕ್ಕಪತ್ರಗಳ ಸಂಖ್ಯೆಯು 31ರಿಂದ (2019–20) 68ಕ್ಕೆ (2021–2022) ಏರಿಕೆಯಾಗಿದ್ದಿತು. ಬಾಕಿಯಿದ್ದಂತಹ 68 ಲೆಕ್ಕಪತ್ರಗಳ ಪೈಕಿ, 62 ಲೆಕ್ಕಪತ್ರಗಳು ಕಾರ್ಯನಿರತ ಸರ್ಕಾರಿ ಕಂಪನಿಗಳಿಗೆ ಸಂಬಂಧಿಸಿದ್ದವು, ಇವುಗಳು ಒಂದರಿಂದ ಏಳು ವರ್ಷಗಳವರೆವಿಗೆ ಬಾಕಿಯಿದ್ದವು ಹಾಗೂ ಆರು ಲೆಕ್ಕಪತ್ರಗಳು ನಾಲ್ಕು ಶಾಸನಬದ್ಧ ನಿಗಮಗಳಿಗೆ ಸಂಬಂಧಿಸಿದ್ದವು, ಇವುಗಳು ಒಂದರಿಂದ ಎರಡು ವರ್ಷಗಳವರೆವಿಗೆ ಬಾಕಿಯಿದ್ದವು.

ಈ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯಚಟುವಟಿಕೆಗಳನ್ನು ಹಾಗೂ ಈ ಸಾರ್ವಜನಿಕ ವಲಯ ಉದ್ದಿಮೆಗಳು ನಿರ್ದಿಷ್ಟ ಅವಧಿಯ ಒಳಗೇ ತಮ್ಮ ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತರುವುದನ್ನು ಹಾಗೂ ಅಳವಡಿಸಿಕೊಳ್ಳುವುದನ್ನು ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯನ್ನು ಆಡಳಿತಾತ್ಮಕ ಇಲಾಖೆಗಳು ಹೊಂದಿರುತ್ತವೆ. ಲೆಕ್ಕಪತ್ರಗಳ ಬಾಕಿಗಳನ್ನು ಸಮಾಪನಗೊಳಿಸುವ ಸಲುವಾಗಿ ಪ್ರಧಾನ ಮಹಾಲೇಖಾಪಾಲರು ಈ ವಿಷಯವನ್ನು ನಿಯತಕಾಲಿಕವಾಗಿ ರಾಜ್ಯ ಸರ್ಕಾರ / ಸಂಬಂಧಿತ ಆಡಳಿತಾತ್ಮಕ ಇಲಾಖೆಗಳೊಂದಿಗೆ ಕೈಗೆತ್ತಿಕೊಂಡಿದ್ದರು.

**3.4.2** 31 ಮಾರ್ಚ್ 2022ರಲ್ಲಿದ್ದಂತೆ, ₹ 480.59 ಕೋಟಿ ಹೂಡಿಕೆಗಳನ್ನು ಹೊಂದಿದ್ದಂತಹ 11 ಸಾರ್ವಜನಿಕ ವಲಯ ಉದ್ದಿಮೆಗಳು ಕಳೆದ 19 ವರ್ಷಗಳಿಂದಲೂ ಕಾರ್ಯಸ್ಥಗಿತಗೊಂಡಿರುವುವು. ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳು ರಾಜ್ಯದ ಆರ್ಥಿಕ ಬೆಳವಣಿಗೆಗೆ ಯಾವುದೇ ಕಾಣಿಕೆಯನ್ನೂ ನೀಡುವುದಿಲ್ಲವಾದ್ದರಿಂದ, ಇದು ಒಂದು ವಿಮರ್ಶಾತ್ಮಕ ಕ್ಷೇತ್ರವಾಗಿದ್ದಿತು.

ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರುವಲ್ಲಿ ಬಾಕಿಗಳಿದ್ದವು. 11 ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ ಹದಿನೇಳರಿಂದ ಹತ್ತೊಂಬತ್ತು ವರ್ಷಗಳವರೆಗಿನ ಲೆಕ್ಕಪತ್ರಗಳು ಬಾಕಿಯಿದ್ದಂತಹ ನಾಲ್ಕು[81] ಸಾರ್ವಜನಿಕ ವಲಯ ಉದ್ದಿಮೆಗಳು ಸಮಾಪನ ಪ್ರಕ್ರಿಯೆಯ ಅಡಿಯಲ್ಲಿದ್ದವು. ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳ ಉಳಿದ ಏಳರ ಪೈಕಿ ಐದು (ಕೆಪಿಎಲ್, ವಿಎಸ್ಎಲ್, ಎಂಎಲ್‌ಡಬ್ಲ್ಯೂ, ಎಂಸಿಟಿ ಮತ್ತು ಎಂಎಂಸಿಎಲ್) ಸಾರ್ವಜನಿಕ ವಲಯ ಉದ್ದಿಮೆಗಳು ಒಂದು ವರ್ಷದ ಬಾಕಿಯನ್ನು ಹೊಂದಿದ್ದವು, ಒಂದು ಸಾರ್ವಜನಿಕ ವಲಯ ಉದ್ದಿಮೆ (ಎನ್‌ಜಿಇಎಫ್) ಎರಡು ವರ್ಷಗಳ ಬಾಕಿಗಳನ್ನು ಹೊಂದಿದ್ದಿತು ಹಾಗೂ ಒಂದು ಸಾರ್ವಜನಿಕ ವಲಯ ಉದ್ದಿಮೆಯು ಎಂಟು ವರ್ಷಗಳ ಬಾಕಿಗಳನ್ನು ಹೊಂದಿದ್ದಿತು (ಬಿಎಸ್‌ಆರ್‌ಸಿಎಲ್).

ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರುವುದಕ್ಕೆ ಸಂಬಂಧಿಸಿದಂತೆ ಸ್ಥಿತಿಗತಿಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿರುವುದು.

[81] ಕೆಎಸ್‌ವಿಎಲ್, ಎಂಸಿಎಲ್, ಕೆಟಿಎಲ್ ಮತ್ತು ಎಂಎಸಿಸಿಎಲ್.

**ಕೋಷ್ಟಕ ಸಂಖ್ಯೆ 3.4.2: ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ– *II*), ಇವರ ಕಚೇರಿಯ ಲೆಕ್ಕಪರಿಶೋಧನಾ ವ್ಯಾಪ್ತಿಯ ಅಡಿಯಲ್ಲಿನ ಕಾರ್ಯಸ್ಥಗಿತ ಸಾರ್ವಜನಿಕ ಉದ್ದಿಮೆಗಳು ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತರುವಲ್ಲಿನ ಸ್ಥಿತಿಗತಿಗಳು**

| ಕ್ರಮ ಸಂಖ್ಯೆ | ಕಾರ್ಯಸ್ಥಗಿತ ಕಂಪನಿಗಳ ಸಂಖ್ಯೆ | ಲೆಕ್ಕಪತ್ರಗಳು ಯಾವ ಅವಧಿಗೆ ಬಾಕಿಯಿದ್ದವು | ಲೆಕ್ಕಪತ್ರಗಳು ಎಷ್ಟು ವರ್ಷಗಳವರೆವಿಗೆ ಬಾಕಿಯಿದ್ದವು |
|---|---|---|---|
| 1 | 5 | 2021–22 | 01 |
| 2 | 1 | 2020–21 to 2021–22 | 02 |
| 3 | 1 | 2014–15 to 2021–22 | 08 |
| 4 | 1 | 2005–06 to 2021–22 | 17 |
| 5 | 2 | 2004–05 to 2021–22 | 18 |
| 6 | 1 | 2003–04 to 2021–22 | 19 |

***ಶಿಫಾರಸು 19:***

**ಸರ್ಕಾರವು ಸರ್ಕಾರಿ ಕಂಪನಿಗಳ ವಾರ್ಷಿಕ ಹಣಕಾಸು ತ:ಖ್ತೆಗಳನ್ನು ಸಮಯೋಚಿತವಾಗಿ ತಯಾರಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು.**

## ಲೆಕ್ಕಪರಿಶೋಧನಾ ವರದಿಗಳ ಮೇಲೆ ಅನುಸರಣಾ ಕ್ರಮಗಳು

### ಬಾಕಿಯಿರುವಂತಹ ಉತ್ತರಗಳು

**3.5.** ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಗಳು ಲೆಕ್ಕಪರಿಶೋಧನಾ ಪ್ರಕ್ರಿಯೆಗಳು ಮುಕ್ತಾಯಗೊಂಡಿರುವುದನ್ನು ಪ್ರತಿನಿಧಿಸುತ್ತವೆ. ಆದ್ದರಿಂದ ಅವುಗಳು ಕಾರ್ಯಾಂಗದಿಂದ ಸೂಕ್ತವಾದಂತಹ ಮತ್ತು ಸಮಯೋಚಿತ ಪ್ರತಿಕ್ರಿಯೆಯನ್ನು ಪಡೆದುಕೊಳ್ಳುವುದು ಅಗತ್ಯವಾಗಿರುತ್ತದೆ. ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಗಳಲ್ಲಿ ಒಳಗೊಂಡಿರುವಂತಹ ಕಂಡಿಕೆಗಳಿಗೆ ಮತ್ತು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳಿಗೆ, ಅವುಗಳನ್ನು ಶಾಸಕಾಂಗದ ಮುಂದೆ ಮಂಡಿಸಿದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯ ಒಳಗೆ ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯಿಂದ (ಸಿಒಪಿಯು) ಯಾವುದೇ ಪ್ರಶ್ನಾವಳಿಗಳಿಗೆ ನಿರೀಕ್ಷಿಸದೆಯೇ ತಮ್ಮ ಉತ್ತರಗಳನ್ನು ಸಲ್ಲಿಸುವಂತೆ ಎಲ್ಲಾ ಆಡಳಿತಾತ್ಮಕ ಇಲಾಖೆಗಳಿಗೆ ನಿರ್ದೇಶನಗಳನ್ನು ನೀಡಿದ್ದಿತು (ಜನವರಿ 1974). ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಗಳಿಗೆ ಕರ್ನಾಟಕ ಸರ್ಕಾರದಿಂದ ಉತ್ತರಗಳ ಸ್ವೀಕೃತಿಯ ಸ್ಥಿತಿಗತಿಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿರುವುದು.

**ಕೋಷ್ಟಕ ಸಂಖ್ಯೆ 3.5.1: 31 ಮಾರ್ಚ್ 2023ರಲ್ಲಿದ್ದಂತೆ ಉತ್ತರಗಳನ್ನು ಸ್ವೀಕರಿಸಿರದಿರುವುದು**

| ಕ್ರಮ ಸಂಖ್ಯೆ | ಲೆಕ್ಕಪರಿಶೋಧನಾ ವರದಿಯು ಸಂಬಂಧಿಸಿರುವಂತಹ ಸಾಲು (ಸಾರ್ವಜನಿಕ ವಲಯ ಉದ್ದಿಮೆಗಳು) | ರಾಜ್ಯ ಶಾಸಕಾಂಗದ ಮುಂದೆ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸಿದ ದಿನಾಂಕ | ಲೆಕ್ಕಪರಿಶೋಧನಾ ವರದಿಯಲ್ಲಿ ಒಳಗೊಂಡಿದ್ದ ಒಟ್ಟಾರೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳು | | ಉತ್ತರಗಳನ್ನು ಸ್ವೀಕರಿಸದಿರುವಂತಹ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳ ಸಂಖ್ಯೆ | |
|---|---|---|---|---|---|---|
| | | | ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳು | ಕಂಡಿಕೆಗಳು | ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳು | ಕಂಡಿಕೆಗಳು |
| 1 | 2016–17 | 22.02.2018 | 2 | 12 | – | – |
| 2 | 2017–18 | 18.02.2020 | 2 | 13 | – | – |
| 3 | 2018–19 | 03.02.2021 | 2 | 5 | – | – |
| 4 | 2019–20 | 20.09.2022 | 1 | 7 | – | – |
| 5 | 2020–21 | 22.02.2023 | 0 | 8 | – | 8 |
| **ಒಟ್ಟು** | | | **7** | **45** | **–** | **8** |

### ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯಿಂದ (ಸಿಒಪಿಯು) ಲೆಕ್ಕಪರಿಶೋಧನಾ ವರದಿಗಳ ಚರ್ಚೆ

**3.6.** ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಪ್ರಕಟಗೊಂಡಿರುವಂತಹ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಗಳು ಮತ್ತು ಕಂಡಿಕೆಗಳು

ಹಾಗೂ ಅವುಗಳ ಬಗ್ಗೆ ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯಿಂದ (ಸಿಒಪಿಯು) ಚರ್ಚಿಸಲ್ಪಟ್ಟಿರುವವುಗಳ ಬಗ್ಗೆ ಸ್ಥಿತಿಗತಿಗಳು ಈ ಕೆಳಗಿನಂತಿದ್ದವು:

**ಕೋಷ್ಟಕ ಸಂಖ್ಯೆ 3.6.1: ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಗಳು ಮತ್ತು ಕಂಡಿಕೆಗಳ ಬಗ್ಗೆ ಚರ್ಚಿತಗೊಂಡಿರುವುದರ ಸ್ಥಿತಿಗತಿಗಳು.**

| ಕ್ರಮ ಸಂಖ್ಯೆ | ಲೆಕ್ಕಪರಿಶೋಧನಾ ವರದಿಯು ಸಂಬಂಧಿಸಿರುವ ಅವಧಿ | ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಗಳು / ಕಂಡಿಕೆಗಳ ಸಂಖ್ಯೆ | | | |
|---|---|---|---|---|---|
| | | ಲೆಕ್ಕಪರಿಶೋಧನಾ ವರದಿಗಳಲ್ಲಿ ಪ್ರಕಟಗೊಂಡಿರುವುದು | | ಚರ್ಚಿಸಲಾಗಿರುವುದು | |
| | | ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಗಳು | ಕಂಡಿಕೆಗಳು | ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಗಳು | ಕಂಡಿಕೆಗಳು |
| 1 | 2010–11 | 2 | 11 | 1 | 11 |
| 2 | 2011–12 | 2 | 12 | 1 | 12 |
| 3 | 2012–13 | 2 | 12 | 2 | 12 |
| 4 | 2013–14 | 2 | 19 | 2 | 19 |
| 5 | 2014–15 | 2 | 17 | 2 | 17 |
| 6 | 2015–16 | 2 | 14 | 2 | 13 |
| 7 | 2016–17 | 2 | 12 | 2 | 12 |
| 8 | 2017–18 | 2 | 13 | 2 | 13 |
| 9 | 2018–19 | 2 | 5 | 1 | 5 |
| 10 | 2019–20 | 1 | 7 | 0 | 0 |
| 11 | 2020–21 | – | 8 | 0 | 0 |
| **ಒಟ್ಟು** | | **19** | **130** | **15** | **114** |

**ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ (ಸಿಒಪಿಯು) ವರದಿಗಳಿಗೆ ಅನುಪಾಲನಾ ಕ್ರಮಗಳು**

**3.7** ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ (COPU) ಮೂರು ವರದಿಗಳು (ವರದಿ ಸಂಖ್ಯೆ 127, 132 ಮತ್ತು 134) 2009–10 ಮತ್ತು 2017–18ರ ನಡುವೆ ಪ್ರಕಟಗೊಂಡಿದ್ದಂತಹ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯಲ್ಲಿ ಕಾಣಿಸಿಕೊಂಡಿರುವ ಒಂದು ಇಲಾಖೆಗೆ[82], ಸಂಬಂಧಿಸಿದಂತೆ 43 ಶಿಫಾರಸುಗಳನ್ನು ಒಳಗೊಂಡಿದ್ದಿತು ಹಾಗೂ ಸ್ವಯಂಆಯ್ಕೆ ಮಾಡಿಕೊಂಡು ನೀಡಲಾಗಿದ್ದಂತಹ ವರದಿಗಳು (ವರದಿ ಸಂಖ್ಯೆ 125, 129, 131, 132 ಮತ್ತು 133) 52 ಶಿಫಾರಸುಗಳನ್ನು ಒಳಗೊಂಡಿದ್ದವು. ಈ ವರದಿಗಳನ್ನು ರಾಜ್ಯ ಶಾಸಕಾಂಗದ ಮುಂದೆ ಡಿಸೆಂಬರ್ 2011 ಮತ್ತು ಫೆಬ್ರವರಿ 2023ರ ನಡುವೆ ಮಂಡಿಸಲಾಗಿದ್ದಿತು.

ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ (COPU) ಮೇಲಿನ ಮೂರು ವರದಿಗಳಿಗೆ ಹಾಗೂ ಸ್ವಯಂಆಯ್ಕೆ ಮಾಡಿಕೊಂಡು ನೀಡಲಾಗಿದ್ದಂತಹ ಐದು ವರದಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದಿಂದ ತೆಗೆದುಕೊಳ್ಳಲಾದಂತಹ ಕ್ರಮಗಳ ಬಗ್ಗೆ ಟಿಪ್ಪಣಿಗಳನ್ನು (ಎಟಿಎನ್) ಸ್ವೀಕರಿಸಿರಲಿಲ್ಲ (ಮಾರ್ಚ್ 2023).

***ಶಿಫಾರಸು 31***

**ಸರ್ಕಾರವು ಕಂಡಿಕೆಗಳು/ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳಿಗೆ ಉತ್ತರಗಳನ್ನು ಹಾಗೂ ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ (ಸಿಒಪಿಯು) ಶಿಫಾರಸುಗಳ ಮೇಲೆ ತೆಗೆದುಕೊಳ್ಳಲಾದಂತಹ ಕ್ರಮಗಳ ಬಗ್ಗೆ ಟಿಪ್ಪಣಿಗಳನ್ನು ನಿರ್ದಿಷ್ಟ ಕಾಲಾವಧಿಯ ಒಳಗೆ ಕಳುಹಿಸುವುದನ್ನು ಖಚಿತಪಡಿಸಿಕೊಳ್ಳಬೇಕು.**

**ಪರೀಕ್ಷಣಾ ವರದಿಗಳಿಗೆ ಪ್ರತಿಕ್ರಿಯೆ**

**3.8.** ಲೆಕ್ಕಪರಿಶೋಧನೆಯ ವೇಳೆಯಲ್ಲಿ ಗಮನಿಸಲಾದಂತಹ ಲೆಕ್ಕಪರಿಶೋಧನಾ ಅಂಶಗಳನ್ನು ಸಾರ್ವಜನಿಕ ವಲಯ ಉದ್ದಿಮೆಗಳ ಮುಖ್ಯಸ್ಥರುಗಳಿಗೆ ಹಾಗೂ ರಾಜ್ಯ ಸರ್ಕಾರದ ಸಂಬಂಧಿತ

[82] ಇಂಧನ ಇಲಾಖೆ

ಇಲಾಖೆಗಳಿಗೆ ಪರೀಕ್ಷಣಾ ವರದಿಗಳ ಮೂಲಕ ಕಳುಹಿಸಿಕೊಡಲಾಗುವುದು. ಸಾರ್ವಜನಿಕ ವಲಯ ಉದ್ದಿಮೆಗಳ ಮುಖ್ಯಸ್ಥರುಗಳು ಪರೀಕ್ಷಣಾ ವರದಿಗಳಿಗೆ ಸಂಬಂಧಿತ ಇಲಾಖೆಗಳ ಮುಖ್ಯಸ್ಥರುಗಳ ಮೂಲಕ ಒಂದು ತಿಂಗಳಿನ ಅವಧಿಯ ಒಳಗೆ ಉತ್ತರಗಳನ್ನು ಒದಗಿಸುವ ಅಗತ್ಯತೆಯಿರುತ್ತದೆ. ಅದಾಗ್ಯೂ, 31 ಮಾರ್ಚ್ 2022 ರ ಅಂತ್ಯಕ್ಕೆ ವಿವಿದ ಇಲಾಖೆಗಳಿಗೆ ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳಿಗೆ ನೀಡಲಾದ 396 ಪರೀಕ್ಷಣಾ ವರದಿಗಳಲ್ಲಿ 2410 ಕಂಡಿಕೆಗಳು ಬಾಕಿ ಉಳಿದಿದ್ದವು. ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಇಲಾಖಾವಾರು ಪರೀಕ್ಷಣಾ ವರದಿಗಳು ಮತ್ತು ಬಾಕಿಯಿರುವಂತಹ ಲೆಕ್ಕಪರಿಶೋಧನಾ ಅಂಶಗಳ ವಿವರಗಳು (31 ಮಾರ್ಚ್ 2022ರಲ್ಲಿದ್ದಂತೆ) ***ಅನುಬಂಧ–35***ರಲ್ಲಿರುವವು.

***ಶಿಫಾರಸು 32:***

**ಸರ್ಕಾರವು ಸಂಬಂಧಿತ ಇಲಾಖೆಗಳಿಗೆ ಈ ಕೆಳಗಿನ ಅಂಶಗಳ ಬಗ್ಗೆ ನಿರ್ದೇಶನಗಳನ್ನು ನೀಡಬೇಕು: (ಎ) ಸರ್ಕಾರವು ರಚಿಸಿರುವಂತಹ ಲೆಕ್ಕಪರಿಶೋಧನಾ ಮೇಲ್ವಿಚಾರಣಾ ಕೋಶದ ವರದಿಯ ಆಧಾರದ ಮೇರೆಗೆ ಪರೀಕ್ಷಣಾ ವರದಿಗಳಿಗೆ ಪ್ರತಿಕ್ರಿಯೆ ನೀಡದಿರುವಂತಹ ಅಧಿಕಾರಿಗಳ ವಿರುದ್ಧ ಕ್ರಮಗಳನ್ನು ಕೈಗೊಳ್ಳುವುದು; ಹಾಗೂ (ಬಿ) ನಷ್ಟಗಳನ್ನು/ ಬಾಕಿಯಿರುವಂತಹ ಮುಂಗಡಗಳನ್ನು / ಅಧಿಕ ಪ್ರಮಾಣದಲ್ಲಿ ಮಾಡಲಾಗಿರುವಂತಹ ಪಾವತಿಗಳನ್ನು ನಿರ್ದಿಷ್ಟ ಕಾಲಾವಧಿಯ ಒಳಗೆ ವಸೂಲಾತಿ ಮಾಡುವುದು.**

**ಬೆಂಗಳೂರು**

(ವಿಮಲೇಂದ್ರ J. ಪಟವರ್ಧನ್)
**ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II)**
**ಕರ್ನಾಟಕ**

**ಮೇಲುರುಜು ಮಾಡಲಾಗಿದೆ**

**ಹೊಸದೆಹಲಿ**

(ಗಿರೀಶ್ ಚಂದ್ರ ಮುರ್ಮು)
**ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**